# ECHO OF HIS CALL

# ಕರೆಯ ಪ್ರತಿಧ್ವನಿ

KANNADA

ECHO OF HIS CALL 1969-2019 GOLDEN JUBILEE
REACHING NATIONS

India's National Spiritual Newspaper

₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAN

Editor : S. SAM SELVA RAJ | 16 Languages | Associate Editor : Rev. R. Rama Krishna

Vol. XXVII | YEAR OF OUR LORD JESUS CHRIST, 2025 APRIL | No.03


## ಪರಿಶುದ್ಧ ಸತ್ಯವೇದ

ದಯವಿಟ್ಟು ಈ ಕೆಳಗಿನ ವಚನಗಳನ್ನು **ಕಂಠಪಾಠ ಮಾಡಿರಿ.**

**ಮಾರ್ಕ್ 16:9-16**

9. ವಾರದ ಮೊದಲನೆಯ ದಿನ ಬೆಳಿಗ್ಗೆ ಯೇಸು ಜೀವಿತನಾಗಿ ಎದ್ದ ಮೇಲೆ ಮಗಳಾದ ಮರಿಯಳಿಗೆ ಮೊದಲು ಕಾಣಿಸಿಕೊಂಡನು. ಆಕೆಗೆ ಏಳು ದೆವ್ವಗಳನ್ನು ಬಿಡಿಸಿದ್ದನು.
10. ಆಕೆ ಹೋಗಿ ಆತನು ಕಾಣಿಸಿಕೊಂಡದ್ದನ್ನು ಮುಂಚೆ ಆತನ ಜೊತೆಯಲ್ಲಿದ್ದವರಿಗೆ ತಿಳಿಸಿದಳು; ಇವರು ಹಂಬಲಿಸುತ್ತಾ ಅಳುತ್ತಾ ಕೂತಿದ್ದರು.
11. ಆತನು ಬದುಕಿದ್ದಾನೆ, ನನಗೆ ಕಾಣಿಸಿಕೊಂಡನು ಎಂಬ ಮಾತನ್ನು ಕೇಳಿದಾಗ ಅವರು ನಂಬಲಿಲ್ಲ.
12. ಇದಾದ ಮೇಲೆ ಶಿಷ್ಯರಲ್ಲಿ ಇಬ್ಬರು ಒಂದು ಹಳ್ಳಿಗೆ ನಡೆದುಕೊಂಡು ಹೋಗುತ್ತಿದ್ದಾಗ ಆತನು ಅವರಿಗೆ ರೂಪಾಂತರದಿಂದ ಕಾಣಿಸಿಕೊಂಡನು.
13. ಅವರು ಹೋಗಿ ಉಳಿದವರಿಗೆ ತಿಳಿಸಿದರು. ಆದರೆ ಅವರನ್ನೂ ನಂಬಲಿಲ್ಲ.
14. ತರುವಾಯ ಹನ್ನೊಂದು ಮಂದಿ ಶಿಷ್ಯರು ಊಟಕ್ಕೆ ಕೂತಿದ್ದಾಗ ಆತನು ಅವರಿಗೂ ಕಾಣಿಸಿಕೊಂಡನು. ತಾನು ಜೀವಿತನಾಗಿ ಎದ್ದು ಬಂದ ಮೇಲೆ ತನ್ನನ್ನು ಕಂಡವರ ಮಾತನ್ನು ಅವರು ನಂಬಲಿಲ್ಲವಾದ ಕಾರಣ ಅತನು ಅವರ ಅಪನಂಬಿಕೆಗೂ ಅವರ ಮನಸ್ಸಿನ ಕಾಠಿಣ್ಯಕ್ಕೂ ಅವರನ್ನು ಗದರಿಸಿದನು.
15. ಆಮೇಲೆ ಅವರಿಗೆ ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ.
16. ನಂಬಿ ದೀಕ್ಷಾ ಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು. ನಂಬದೆ ಹೋಗುವವನು ದಂಡನೆಗೆ ಗುರಿಯಾಗುವವನು.

## ಪುನರುತ್ಥಾನದ ಹಿಂದಿನ ನಿರೀಕ್ಷೆ!

### THE HOPE BEHIND RESURRECTION!


ಗೌರವ ಮುಖ್ಯಸಂಪಾದಕರು
ಘನ ಏಂಜಲಿನ್ ಸೆಲ್ವಕುಮಾರಿ




ಈಸ್ಟರ್ ಹೊಸ ನಿರೀಕ್ಷೆಯ ಆಚರಣೆಯಾಗಿದೆ. ಕ್ರಿಸ್ತನ ಪುನರುತ್ಥಾನದ ಮೂಲಕ ಹತಾಶೆಯನ್ನು ಸಂತೋಷವಾಗಿ ಪರಿವರ್ತಿಸುವ ಸಮಯ. ಆದರೂ, ನಮ್ಮ ಕಾರ್ಯನಿರತ ಜೀವನ ಮತ್ತು ಪಟ್ಟು ಹಿಡಿದ ಹೋರಾಟಗಳ ಮಧ್ಯೆ, ನಿರೀಕ್ಷೆ ಕೆಲವೊಮ್ಮೆ ದೂರವನ್ನು ಅನುಭವಿಸಬಹುದು. ಅನೇಕ ಸಂದರ್ಭಗಳಲ್ಲಿ ನಮ್ಮ ನಂಬಿಕೆಯು ಏರುಪೇರು ಆಗುತ್ತದೆ. ನಮ್ಮ ದರ್ಶನಗಳಲ್ಲಿ ಅನುಮಾನಗಳ ಮೋಡ ಬಂದಾಗ, ನಮ್ಮ ಕೆಲಸಗಳಲ್ಲಿ ದೇವರ ಕೈಯನ್ನು ಗ್ರಹಿಸಲು ಹೆಣಗಾಡುತ್ತಿರುವಾಗ, ಅನಿಶ್ಚಿತತೆಯಿಂದ ನೀವು ಎಂದಾದರೂ ಮುಳುಗಿದ್ದರೆ, ನೀವು ಏಕಾಂಗಿಯಲ್ಲ ಎಂದು ಹೃದಯವನ್ನು ಗಟ್ಟಿ ಮಾಡಿಕೊಳ್ಳಿರಿ.

ಲೂಕ 24:13-35ರಲ್ಲಿ ಎಮ್ಮಾಹು ರಸ್ತೆಯಲ್ಲಿ ಎರಡು ಶಿಷ್ಯರ ಕಥೆಯನ್ನು ನಾವು ನೋಡುತ್ತೇವೆ. ಈ ಸತ್ಯವನ್ನು ಶಕ್ತಿಯುತವಾಗಿ ವಿವರಿಸುತ್ತದೆ. ನಮ್ಮ ಅನುಮಾನಗಳ ಸನ್ನಿವೇಶಗಳಲ್ಲಿ ಕೂಡ ಯೇಸು ನಮ್ಮ ಜೊತೆ ನಡೆಯುತ್ತಾ ಇದ್ದಾನೆ ಎಂದು ನಮಗೆ ಜ್ಞಾಪಕಪಡಿಸುತ್ತದೆ. ನಿಮ್ಮ ನಂಬಿಕೆಯನ್ನು ಪುನರುಜ್ಜೀವನಗೊಳಿಸಲು ಮತ್ತು ನಮ್ಮ ನಿರೀಕ್ಷೆಯನ್ನು ಪುನಃಸ್ಥಾಪಿಸಲು ಸಿದ್ಧವಾಗಿದೆ.

(3ನೇ ಪುಟಕ್ಕೆ)




**Echo of His Call**

**Christian YouTube Channel!**

**An opportunity to pray with Pr. S. Sam Selva Raj!**

**Message & Prayer in 5 minutes!!**

**English, Hindi, Tamil & Telugu**

**Every day – From 2.00 A.M.**

**Tamil Sunday Service – 8.30 A.M.**

*** Please Subscribe and Share ***

# ECHO OF HIS CALL - (1969-2019 GOLDEN JUBILEE YEAR)

## *from your dearly beloved brother...*

ECHO OF HIS CALL 1969-2019
REACHING NATIONS





**OUR MISSION POLICY**

We should expound and teach the contemporary generation the undiluted teachings of the ancient and early Apostles. It is the need of the hour.


HON. EDITOR-IN-CHIEF
Rev. Angeline S. Kumari, M.A., M.Sc., M.Ed.

EX MANAGING EDITOR
Pastor Alex Samson Sam, B.Th., M.Div.

GENERAL MANAGER
Bro. N. Prakasam, M.A., M.Sc.(C&P), PGDHRM, MBA.

ADMINISTRATION
Sis. Jesy Veena Sam
Adv. K. Puratchivendan, M.Com., C.A., B.L.
Dr. P.E.R. Premchand, M.Sc., M.A., M.Ed., Ph.D.
Dr. C.G.S. Baburao, B.Tech., M.Tech. (DM), Ph.D.
Dr. Rabinder Boaz, M.S. (CMC)

EDITORIAL BOARD
Dr. Serena Bevin, M.A., M.Phil., B.Ed.
Sis. Sajini Cherian
Rev. Dr. K.R. Rajasekaran
Rev. Dr. William Robert, Ph.D., DD, D.Lit.

EDITOR, PUBLISHER & PRINTER



Pastor S. SAM SELVA RAJ
Echo of His Call Printers
10, Mohammed Abdullah 2nd Street,
Chepauk, Chennai- 600 005, India.
Phone : (+ 91- 44) 2852 8282, 2852 9293, 2854 7766
Cell : (+91) 98410 71852, 98412 71858 95661 31858

E.MAIL
sam@echoofhiscall.org
biblecor@yahoo.co.in

WEBSITES
www.echoofhiscall.org
www.stpaulsmatriculation.org

YOUTUBE CHANNEL
Echo of His Call


ಆಗ ನೀವು ನಿಮ್ಮ ಮುಂದಣ ಸಂತತಿಯವರಿಗೆ ದೇವರು ಇಂಥವರು; ಆತನು ಯುಗಯುಗಾಂತರಗಳಲ್ಲಿಯೂ ನಮ್ಮ ದೇವರು ನಿರಂತರವೂ ನಮ್ಮನ್ನು ನಡೆಸುವವನಾಗಿದ್ದಾನೆ ಎಂದು ತಿಳಿಸುವಿರಿ. (ಕೀರ್ತನೆ 48:14)

ಕ್ರಿಸ್ತನಲ್ಲಿ ಪ್ರೀತಿಯುಳ್ಳವರೇ,

ನಮ್ಮ ಕರ್ತನಾದ ಯೇಸುಕ್ರಿಸ್ತನ ಅಮೂಲ್ಯವಾದ ನಾಮದಲ್ಲಿ ನಿಮಗೆ ಶುಭಾಶಯಗಳು! **ಯೆಹೋವನು ಒಳ್ಳೆಯವನು ಆತನ ಕೃಪೆಯು ಶಾಶ್ವತವಾಗಿದೆ** 2 ಪೂರ್ವಕಾಲ 7:3.

ದೇವರ ನಂಬಿಗಸ್ತಿಕೆಯಿಂದ, 1969ರಲ್ಲಿ ನಮ್ಮ ಪ್ರಾರಂಭದಿಂದಲೂ 55 ಅದ್ಭುತ ವರ್ಷಗಳ ಸೇವೆಯ ಮೂಲಕ ನಮ್ಮನ್ನು ಮುನ್ನಡೆಸಿದ್ದಾನೆ. ನಮ್ಮ ವ್ಯವಸ್ಥಾಪಕ ಸಂಪಾದಕ ಮತ್ತು ನಮ್ಮ ಮಗ ಪಾ. ಅಲೆಕ್ಸ್ ಸ್ಯಾಮಸನ್ ಸ್ಯಾಮ್ ನಮ್ಮ ಪಕ್ಕದಲ್ಲಿ ನಿಂತು, ಕೈಯಲ್ಲಿ ಕೆಲಸ ಮಾಡುತ್ತಿದ್ದ. ತನ್ನ ಓಟವನ್ನು ಮುಗಿಸಿ 13-03-25ರಂದು ಕರ್ತನ ಉಪಸ್ಥಿತಿಗೆ ಪ್ರವೇಶ ಮಾಡಿದರು. ಆತನ ಜೀವಿತಕ್ಕಾಗಿ ಮತ್ತು ಆತನ ಸೇವೆಯಲ್ಲಿ ಆತನ ಕೊಡುಗೆಗಾಗಿ ನಾವು ದೇವರಿಗೆ ಸ್ತೋತ್ರ ಸಲ್ಲಿಸುತ್ತೇವೆ. ಸುಮಾರು 30 ವರ್ಷಗಳು. ಪುನಃ ನಾವು ಬೇಟಿಯಾಗುತ್ತೇವೆ. ನಿಮ್ಮ ಪ್ರಾರ್ಥನೆಗಳು ನಮಗೆ ಅಗತ್ಯವಾಗಿವೆ.



*Sister Angeline Selvakumari*

ಆತನ **ಕರೆಯ ಪ್ರತಿಧ್ವನಿ**ಯ ಸೇವೆಗಳ 56ನೇ ವಾರ್ಷಿಕೋತ್ಸವವನ್ನು ನಮ್ಮ ಸಂತೋಷಪುರಂ ಮೈದಾನದಲ್ಲಿ ಆಗಸ್ಟ್ 8, 9 ಮತ್ತು 10 ರಂದು ನಡೆಸಲಾಗುವುದು. ಈ ಒಂದು ಕೂಟಗಳಲ್ಲಿ ವಿಷೇಶ ಸಂದೇಶಕರು ದೇವರ ವಾಕ್ಯವನ್ನು ಹಂಚಿಕೊಡುತ್ತಾರೆ. ಇದಕ್ಕಾಗಿ ನಾವು ನಿಮ್ಮನ್ನು ಪ್ರಾರ್ಥನೆ ಮತ್ತು ಸಂಗತಿಯಲ್ಲಿ ಭಾಗಿಯಾಗಬೇಕೆಂದು ಆಹ್ವಾನಿಸುತ್ತೇವೆ.

ನಮ್ಮ ಪ್ರೀತಿಯ ಮಗಳಾದ ಸಹೋದರಿ ಎಂಜಿಲಿನ್ ಸೆಲ್ವಕುಮಾರಿ ಗೌರವ ಮುಖ್ಯ ಸಂಪಾದಕರನ್ನು ಮುಖ್ಯಸ್ಥರನ್ನಾಗಿ ನಮ್ಮ ಕಛೇರಿಗಳ ಕಾರ್ಯನಿರ್ವಹಕರನ್ನಾಗಿ ನೇಮಕ ಮಾಡುವುದಕ್ಕೆ ನಾವು ಸಂತೋಷದಿಂದ ಪ್ರಕಟಿಸುತ್ತೇವೆ. ಅವರ ಜೊತೆಗೆ ಸಮರ್ಪಣೆಯುಳ್ಳ ಸದಸ್ಯರು. ನಮ್ಮ ತಂಡ ಮತ್ತು ಸೇವೆಯ ಪಾಲುದಾರರನ್ನು ಪ್ರಾರ್ಥನೆಯಲ್ಲಿ ಎತ್ತಿಹಿಡಿಯಲು ಮತ್ತು ನಾವು ಈ ಸೇವೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವಾಗ ನಿಮ್ಮ ಸಂಪೂರ್ಣ ಬೆಂಬಲವನ್ನು ವಿಸ್ತರಿಸಲು ನಾವು ವಿನಂತಿಸಿಕೊಳ್ಳುತ್ತೇವೆ.

## ಅಂತರಾಷ್ಟ್ರೀಯ ಯೆಹೋಶುವ ವೀರರು!

ಕಳೆದ ಮೂರು ವರ್ಷಗಳಲ್ಲಿ ನಮ್ಮ ಅಂತರಾಷ್ಟ್ರೀಯ **ಯೆಹೋಶು ವೀರರು**
ಈ ಕೆಳಗಿನ ಸೇವೆಗಳಲ್ಲಿ ಅವರು ನಿರಂತರಾಗಿದ್ದಾರೆ.

### 1. ಗ್ಲೋಬಲ್ ವಿಷನ್ ಫಾರ್ ಯುತ್ ಅಂಡ್ ಕಿಂಡ್ಸ್ ಕೇರ್ :

ನಿಮ್ಮ ಪ್ರತ್ಯೇಕ ರಾಷ್ಟ್ರಗಳಲ್ಲಿ ಅನುದಿನವು ಸಮರ್ಪಣೆಯುಳ್ಳ ಪ್ರಾರ್ಥನೆಯ ಸಮಯವನ್ನು ರಾತ್ರಿ 10 ಗಂಟೆಗೆ ನಿಗದಿಪಡಿಸಲಾಗಿದೆ. ನೀವು ಕೂಡ ಪ್ರಾರ್ಥನೆ ಮಾಡಬೇಕೆಂದು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.

***ಈ ಜಗತ್ತಿನಲ್ಲಿರುವ ಎಲ್ಲಾ ಯೌವ್ವನ ಸ್ತ್ರೀ ಮತ್ತು ಪುರುಷರನ್ನು ಮತ್ತು ಮಕ್ಕಳನ್ನು ಕರ್ತನೆ ದಯಮಾಡಿ ಜ್ಞಾಪಕ ಮಾಡಿಕೋ.***

ಈ ವರ್ಷಗಳಲ್ಲಿ ನಮ್ಮ ಸಭೆಗಳಲ್ಲಿ ಯುವಕರಲ್ಲಿ ದೇವರು ಶಕ್ತಿಯುತವಾಗಿ ಚಲಿಸುತ್ತಾನೆ. ಈ ಪ್ರಾರ್ಥನಾ ತಂಡಕ್ಕೆ ನೀವು ಪ್ರವೇಶವಾಗಿರಿ. ಈ ಪ್ರಾರ್ಥನೆಯನ್ನು ನೀವು ರಾತ್ರಿ 10 ಗಂಟೆಗೆ ಸಲ್ಲಿಸಬಹುದು. ನೀವು ವಾಸ ಮಾಡುವ ಸ್ಥಳದಲ್ಲಿ ಪ್ರತಿದಿನ ನೀವು ಆರಾಧನೆ ಮಾಡಬಹುದು. ದೇವರು ನಿಮ್ಮನ್ನು ಆಶೀರ್ವದಿಸಲಿ.

**2. 2.24 ತಾಸುಗಳ ಸರಪಳಿ ಪ್ರಾರ್ಥನೆ :**

ಪ್ರಪಂಚದ ಉಜ್ಜೀವನಕ್ಕಾಗಿ ಭಾರದಿಂದ ಪ್ರಾರ್ಥನೆ ಮಾಡುವದಕ್ಕಾಗಿ ನಮಗೆ ಜನರು ಬೇಕಾಗಿದ್ದಾರೆ. ನಾವು ಪ್ರತಿದಿನ, ವಾರ ಪೂರ್ತಿ ಪ್ರಾರ್ಥನೆಯ ನಿರಂತರ ಸರಪಳಿಯನ್ನು ಹೊಂದಿದ್ದೇವೆ. ನಿಮ್ಮ ಆದ್ಯತೆಯ ಸಮಯದಲ್ಲಿ ಒಂದು ಗಂಟೆ ಪ್ರಾರ್ಥನೆ ಅವಧಿಗೆ ನೀವು ಸಹಿ ಮಾಡುವ ಮೂಲಕ ಭಾಗವಹಿಸಲು ನಾವು ನಿಮ್ಮನ್ನು ಆಹ್ವಾನಿಸುತ್ತೇವೆ. ದಯಮಾಡಿ ನಿಮ್ಮ ಹೆಸರು, ಮೊಬೈಲ್ ಸಂಖ್ಯೆ ಮತ್ತು ನಿಮ್ಮ ಆದ್ಯತೆಯ ಸಮಯವನ್ನು ನಮ್ಮ ಕಛೇರಿಗೆ ಕಳುಹಿಸಿ ಕೊಡಿರಿ.

**3. ಅಧ್ಯಯನ ಗೋಷ್ಠಿಗಳು, ಶಿಬಿರಗಳು ಮತ್ತು ಕಾರ್ಯಾಗಾರಗಳು :**

ಯುವ ಮತ್ತು ಮಕ್ಕಳಿಗೆ ವಿಶೇಷ ತರಬೇತಿ ಅವಧಿಗಳನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆಸಲಾಗುತ್ತದೆ, ಕರ್ತನಾದ ಯೇಸುಕ್ರಿಸ್ತನಿಗೆ ಸಾಕ್ಷಿಯಾಗಿ ವಿಶ್ವದಾದ್ಯಂತ ಯುವಕ-ಯುವತಿಯರನ್ನು ಬೆಳೆಸಲು ಪಂಗಡದ ಅಡೆತಡೆಗಳನ್ನು ಮೀರಿ. ಈ ಜಗತ್ತಿನ ಪ್ರಾರ್ಥನೆ ಸೇವೆಯಲ್ಲಿ ಪಾಲು ತೆಗೆದು ಕೊಳ್ಳುವದಕ್ಕೆ ನಿಮಗೆ ಆಸಕ್ತಿ ಇದ್ದರೆ, ನೀವು ಉಚಿತವಾಗಿ ನೊಂದಾಯಿಸಿ ಕೊಳ್ಳಬಹುದು. ನಾವು ನಿಮಗೆ ವಿಷಯಗಳನ್ನು ಮತ್ತು ವಾರ್ತೆ ಮತ್ತು ಸಾಕ್ಷಿಗಳನ್ನು ತಿಳಿಸುತ್ತೇವೆ. ಈ ಸೇವೆಯ ಜವಾಬ್ದಾರಿಯನ್ನು ಸಹೋದರಿ ಅಂದ್ರೆ ಕ್ರಿಸ್ಮಸ್ ಹೆನ್ರಿಯವರು ತೆಗೆದುಕೊಂಡಿದ್ದಾರೆ.



***Sister Andrea Christmas Henry***

**ಸಂತ ಪೌಲ್ ಮೆಟ್ರಿಕ್ಯುಲೇಷನ್ ಶಾಲೆ**



***Rev. Dr. John Rajarathnam***

ನಮ್ಮ **ಸಂತ ಪೌಲ್ ಮೆಟ್ರಿಕ್ಯುಲೇಷನ್ ಶಾಲೆಗೆ** ಸಾಮರ್ಥ್ಯವುಳ್ಳ ನಾಯಕರಗಳನ್ನು ಮತ್ತು ಶಿಕ್ಷಕರನ್ನು ಹುಡುಕುತ್ತಾ ಇದ್ದೇವೆ.

**ನೆಹಮೀಯ ಸತ್ಯವೇದ ಕಾಲೇಜುಗಳು :**

ನಮ್ಮ **ನೆಹಮೀಯ ಸತ್ಯವೇದ ಕಾಲೇಜು**ಗಳು ಪರಿಣಾಮಕಾರಿಯಾಗಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಾ ಇವೆ.

(i) **ತಮಿಳು ತರಗತಿಗಳು :-** ವೆಲಿಚರಿ, ಚೆಪಾಕ್ ಮತ್ತು ಸಂತೋಷಪುರಂ (ಸಾಯಂಕಾಲದ ತರಗತಿಗಳು, ವಾರದಲ್ಲಿ ಮೂರು ದಿನ, ಸೋಮವಾರ, ಮಂಗಳವಾರ, ಗುರುವಾರ).

(ii) **ಹಿಂದಿ ತರಗತಿಗಳು :** ವೆಲಿಚರಿ (ವಸತಿ) ಹಿರಿಯ ಮುಖ್ಯೋಪಾಧ್ಯಾಯರಾದ ಘನ. ಡಾ. ಜಾನ್‌ರಾಜ ಇದನ್ನು ನಡೆಸಿಕೊಂಡು ಹೋಗುತ್ತಿರುವಾಗ ದಯಮಾಡಿ ನಿಮ್ಮ ಪ್ರಾರ್ಥನೆಗಳಲ್ಲಿ ಅವರನ್ನು ಜ್ಞಾಪಕಮಾಡಿಕೊಳ್ಳಿರಿ.

## ಒಪ್ಪಿಕೊಳ್ಳುವಿಕೆ ಮತ್ತು ಕೃತಜ್ಞತೆ!

ನಮ್ಮ ಸಮರ್ಪಣೆಯುಳ್ಳ ಸಹ ಸಂಪಾದಕರ ತಂಡ, ಕಛೇರಿಯ ಸಿಬ್ಬಂದಿಗಳು, ಡಿಟಿಪಿ ಸಿಬ್ಬಂದಿಗಳು ಮತ್ತು ಮುದ್ರಕರಿಗೆ ನಾವು ದೇವರಿಗೆ ಸ್ತೋತ್ರವನ್ನು ಸಲ್ಲಿಸುತ್ತೇವೆ. ಅವರು ದಣಿವರಿಯದ ಪ್ರಯತ್ನಗಳು 16 ಭಾಷೆಗಳಲ್ಲಿ ಆತನ **ಕರೆಯ ಪ್ರತಿಧ್ವನಿ** ಮಾಸಿಕ ಪತ್ರಿಕೆ ಪ್ರಕಟನೆಯನ್ನು ಖಚಿತಿ ಪಡಿಸುತ್ತಾರೆ. ಈ 75 ವ್ಯಕ್ತಿಗಳನ್ನು ನಿಮ್ಮ ಪ್ರಾರ್ಥನೆಗಳಲ್ಲಿ ಜ್ಞಾಪಕ ಮಾಡಿಕೊಳ್ಳಿರಿ.

100ಕ್ಕಿಂತ ಸೇವಕರುಗಳು ನಮ್ಮ ಮುಖ್ಯ ಮತ್ತು ಶಾಖಸಭೆಗಳಲ್ಲಿ ಸಭಾ ಪಾಲಕರುಗಳಾಗಿ,ಭಾನುವಾರ ಶಾಲೆಯ ಶಿಕ್ಷಕರುಗಳಾಗಿ, ಪ್ರಾರ್ಥನೆ ಗುಂಪಿನ ನಾಯಕರುಗಳು, ಯುವ ನಾಯಕರುಗಳು ಮತ್ತು ಮನೆಯ ಪ್ರಾರ್ಥನೆಯ ಗುಂಪಿನ ನಾಯಕರುಗಳಾಗಿ ನಂಬಿಕೆಯಿಂದ ಸೇವೆ ಮಾಡುತ್ತಾ ಇದ್ದಾರೆ. ನಾವು ಆಸಕ್ತಿಯಿಂದ ನಿಮ್ಮ ನಿರಂತರ ಪ್ರಾರ್ಥನೆಗಳನ್ನು ಬೇಡುತ್ತೇವೆ ಮತ್ತು ಈ ಸೇವೆಗಳಿಗೆ ಸಹಾಯಮಾಡಬೇಕೆಂದು.

ನಾವು ನಂಬಿಕೆಯಲ್ಲಿ ನಿಂತಿದ್ದೇವೆ, ನಮ್ಮ ಎಲ್ಲಾ ಅಗತ್ಯತೆಗಳನ್ನು ತನ್ನ ಜನರ ಮೂಲ್‌ಕವಾಗಿ ಕರ್ತನಾದ ಯೇಸುಕ್ರಿಸ್ತನನ್ನು ಒದಗಿಸುವನು ಎಂದು ನಾವು ನಂಬುತ್ತೇವೆ. ನಾವು ಮನುಷ್ಯರ ಶಕ್ತಿಯ ಮೇಲೆ ಆಧಾರವಾಗಿಲ್ಲ, ಆದರೆ ದೇವರ ಒದಗಿಸುವಿಕೆಯಿಂದ. ಈ ಸೇವೆಗಾಗಿ ನೀವು ಪ್ರಾರ್ಥನೆಯಲ್ಲಿ ಭಾಗವಹಿಸಬೇಕೆಂದು ನಾವು ನಿಮ್ಮನ್ನು ಆಹ್ವಾನಿಸುತ್ತೇವೆ. ಕರ್ತನ ಆತ್ಮನು ನಿಮಗೆ ಪ್ರೇರೇಪಿಸಿದರೆ ಸಹಾಯವನ್ನು ಮಾಡಿರಿ.

ಆತನು ಹಿಂದಿರುಗಿ ಬರುವಾಗ ಕರ್ತನು ನಿಮಗೆ ಬಹುಮಾನಗಳನ್ನು ಕೊಡಲಿ.

ಕೃಪೆಯು ನಿಮ್ಮೊಂದಿಗಿರಲಿ.

ಆತನ ಸೇವೆಯಲ್ಲಿ

**ಆತನ ಕರೆಯ ಪ್ರತಿಧ್ವನಿಯ ಕುಟುಂಬ**

E.mail : sam@echoofhiscall.org

## YouTube Daily Devotion!

Our 5 minute **Echo of His Call** YouTube messages are being broadcast from 2.00 A.M. in Tamil, Telugu, English and Hindi (everyday). You can receive the Grace of God by watching the messages.

Moreover, save our mobile numbers (+91) 98410 71858, (+91) 98412 71858 (personal) in your mobile phones.

- Pr. S. Sam Selva Raj

*(1ನೇ ಪುಟದಿಂದ)*

## ಅಪನಂಬಿಕೆಯ ಭಾರ!

ಇಬ್ಬರು ಶಿಷ್ಯರು ಧೂಳಿನ ರಸ್ತೆಯ ಉದ್ದಕ್ಕೂ ನಡೆದುಕೊಂಡು ಹೋಗುತ್ತಾರೆ. ಅವರ ಹೆಜ್ಜೆಗಳು ದುಃಖದಿಂದ ಭಾರವಾಗಿವೆ ಮತ್ತು ಅವರ ಹೃದಯಗಳು ನಿರಾಶೆಯಿಂದ ತೂಗುತ್ತಾ ಇವೆ.

ಅವರು ತಮ್ಮ ಎಲ್ಲಾ ನಂಬಿಕೆಯನ್ನು ಯೇಸುವಿನ ಮೇಲೆ ಹಾಕಿದ್ದರು. ಇಸ್ರಾಯೇಲ್ ಅನ್ನು ಪುನಃ ಪಡೆದುಕೊಳ್ಳುವ ಬಹುನಿರೀಕ್ಷಿತ ಮೆಸ್ಸೀಯನು ಎಂದು ನಂಬಿದ್ದರು. ಆದರೆ ಈಗ ಆತನ ಕ್ರೂಜೆಯು ಅವರ ಮನಸ್ಸಿನಲ್ಲಿ ಬಹಳ ತಾಜವಾಗಿದೆ. ಅವರ ಎಲ್ಲಾ ಕನಸುಗಳು ನುಚ್ಚು ನೂರಾಗಿವೆ. ಆತನ ಪುನರುತ್ಥಾನದ ವದಂತಿಗಳ ಮೂಲಕ ಹರಡಲು ಪ್ರಾರಂಭಿಸಿತು. ಅವರ ದುಃಖ ಮತ್ತು ಅನುಮಾನಕ್ಕೆ ತಿಳುವಳಿಕೆಯ ಮೋಡವು ಆವರಿಸಿತು.

ಅವರು ಪಯಣಿಸುವಾಗ ಅಪರಿಚಿತರು ಅವರೊಂದಿಗೆ ಸೇರಿಕೊಂಡರು. ಯೇಸು ಸ್ವತಃ ಇದ್ದರೂ ಕೂಡ ಅವರು ಆತನನ್ನು ಗುರುತಿಸಲಿಲ್ಲ. ಅವರ ಸಂಭಾಷಣೆಯ ಬಗ್ಗೆ ಆತನು ವಿಚಾರಿಸಿದಾಗ, ಅವರು ತಮ್ಮ ದುಃಖ ಮತ್ತು ಗೊಂದಲವನ್ನು ಹಂಚಿ ಕೊಂಡರು. ಯೇಸು ತಾಳ್ಮೆಯಿಂದ ಕೇಳಿಸಿಕೊಂಡನು. ನಂತರ ಅವರನ್ನು ನಿಧಾನವಾಗಿ ಖಂಡಿಸಿದನು.

**ಎಲಾ, ಬುದ್ಧಿಯಿಲ್ಲದವರೇ, ಪ್ರವಾದಿಗಳು ಹೇಳಿದ್ದೆಲ್ಲವನ್ನು ನಂಬುವುದರಲ್ಲಿ ಮಂದ**

**ಹೃದಯುರೇ, ಕ್ರಿಸ್ತನು ಇಂಥ ಶ್ರಮಗಳನ್ನು ಅನುಭವಿಸಿ ತನ್ನ ಮಹಾಪದವಿಗೆ ಸೇರುವುದು ಅಗತ್ಯವಾಗಿತ್ತಲ್ಲವೇ!** (ಲೂಕ 24:25).

ಆತನ ಮಾತುಗಳು ಬಿರುಸಾಗಿರಲಿಲ್ಲ. ಆದರೆ ದೇವರ ವಾಕ್ಯದ ವಾಗ್ದಾನಗಳನ್ನು ಜ್ಞಾಪಕ ಮಾಡಿಕೊಳ್ಳುವ ಪ್ರೀತಿಯ ಕರೆಯುವಿಕೆ. ಎಲ್ಲಾ ಪ್ರವಾದನೆಗಳ ಜ್ಞಾಪಕ. ಪ್ರತಿ ದೈವತ್ವದ ಭರವಸೆ. ಯಾವಾಗಲೂ ಆತನ ಕಡೆಗೆ ತೋರಿಸಿದೆ.

ಶಿಷ್ಯರ ಜಾಗದಲ್ಲಿ ನಾವು ಎಷ್ಟು ಬಾರಿ ನಮ್ಮನ್ನು ಕಂಡುಕೊಳ್ಳುತ್ತೇವೆ? ನಮಗೆ ದೇವರ ವಾಗ್ದಾನಗಳು ಗೊತ್ತು. ಪ್ರತಿಕೂಲತೆಯ ಹೊಡೆದಾಗ, ನಮ್ಮ ಗಮನವು ಆತನ ಸತ್ಯಕ್ಕಿಂತ ಹೆಚ್ಚಾಗಿ ನಮ್ಮ ತೊಂದರೆಗಳಿಗೆ ಬದಲಾಗುತ್ತದೆ. ನಮ್ಮ ಭಾವನೆಗಳು ನಮ್ಮ ನಂಬಿಕೆಯನ್ನು ಮರೆ ಮಾಡುತ್ತವೆ. ನಮ್ಮನ್ನು ನಿರುತ್ಸಾಹಗೊಳಿಸುತ್ತವೆ. ಆದರೆ ಬದಲಾಗದ ಸತ್ಯವು ಹಾಗೆ ಇರುತ್ತದೆ. ಯಾವಾಗ ಆತನನ್ನು ಗುರುತಿಸದೆ ಇದಾಗ್ಯೂ ಯೇಸು ನಮ್ಮ ಸಂಗಡ ನಡೆಯುತ್ತಾ ಇರುತ್ತಾನೆ. ನಮ್ಮ ಜೀವಿತಗಳಲ್ಲಿ ತನ್ನನ್ನು ಪ್ರಕಟಿಸುವುದಕ್ಕೆ ತಾಳ್ಮೆಯಿಂದ ಕಾಯುತ್ತಾ ಇದ್ದಾನೆ.

## ಯೇಸು, ದೊಡ್ಡ ಸಂತೈಸುವವನು!

ಎಮ್ಮಾಹು ಖಾತೆಯನ್ನು ಎಷ್ಟು ಆಳವಾಗಿ ಚಲಿಸುವಂತೆ ಮಾಡುತ್ತದೆ ಎಂದರೆ ಯೇಸು ತನ್ನ ಶಿಷ್ಯರನ್ನು ಸಮೀಪಿಸಲು ಆಯ್ಕೆ ಮಾಡುವ ರೀತಿ. ಭವ್ಯತೆ ಅಥವಾ ಚಮತ್ಕಾರಗಳೊಂದಿಗೆ ಆತನು ತಕ್ಷಣ ತನ್ನ ಗುರುತನ್ನು ಬಹಿರಂಗ ಪಡಿಸಲಿಲ್ಲ. ಬದಲಾಗಿ, ಆತನು ಅವರ ಪಕ್ಕದಲ್ಲಿ ನಡೆಯುತ್ತಾನೆ. ಅವರ ದುಃಖವನ್ನು ಆಲಿಸುತ್ತಾನೆ ಮತ್ತು ನಿಧಾನವಾಗಿ ಅವರನ್ನು ಅರ್ಥ ಮಾಡಿಕೊಳ್ಳುವ ಕಡೆಗೆ ಕರೆದೊಯ್ಯುತ್ತಾನೆ. ಇದನ್ನು ಮಾಡುವುದರಿಂದ, ಅವರು ತಮ್ಮ ಹೋರಾಟಗಳ ಬಗ್ಗೆ ತಮ್ಮ ಆಳವಾದ ಅರಿವನ್ನು ಪ್ರದರ್ಶಿಸುತ್ತಾನೆ. ನಮ್ಮ ಮುರಿದ ಮತ್ತು ದುಃಖದ ಕ್ಷಣಗಳಲ್ಲಿ ಯೇಸು ನಮ್ಮನ್ನು ಭೇಟಿ ಯಾಗುತ್ತಾನೆ. ಆತನು ನಮ್ಮಿಂದ ತಕ್ಷಣದ ನಂಬಿಕೆಯನ್ನು ಅಪೇಕ್ಷಿಸುವುದಿಲ್ಲ ಅಥವಾ ನಮ್ಮ ನೋವು ರಾತೋರಾತ್ರಿ ಕಣ್ಮರೆಯಾಗುತ್ತದೆ ಎಂದು ನಿರೀಕ್ಷಿಸುತ್ತೇವೆ. ಬದಲಾಗಿ, ಆತನು ತನ್ನ ಪ್ರೀತಿಯ ಉಪಸ್ಥಿತಿ ಮತ್ತು ತನ್ನ ಸತ್ಯದ ಗುಣಪಡಿಸುವ ಶಕ್ತಿಯನ್ನು ನೀಡುತ್ತಾನೆ.

ನೀವು ಕಳೆದು ಹೋದ ಸಮಯದ ಬಗ್ಗೆ ಯೋಚಿಸಿ - ಬಹುಶಃ ನೋವಿನ ಘಟನೆಯ ನಂತರ, ಕೆಲಸದ ನಷ್ಟ ಅಥವಾ ವೈಫಲ್ಯಗಳು ದುಸ್ತರವೆಂದು ತೋರುತ್ತಿವೆ. ಆ ಒಂದು ಸನ್ನಿವೇಶಗಳಲ್ಲಿ, ದೇವರು ಮೌನವಾಗಿದ್ದಾನೆ ಏನು ಎಂದು ನಿಮಗೆ ಆಶ್ಚರ್ಯವಾಗಬಹುದು. ಆದ್ಯಾಗೂ, ಅಲ್ಲಿ ಆತನು ಯಾವಾಗಲೂ ಇರುವಾತನಾಗಿದ್ದಾನೆ ಇದು ಸತ್ಯವಾಗಿದೆ. ನಮ್ಮ ಜೊತೆಯಲ್ಲಿ ನಡೆಯುತ್ತಾನೆ. ಆತನ ವಾಕ್ಯದ ಮೂಲಕ ಮಾತನಾಡುತ್ತಾನೆ. ಆತನನ್ನು ನೀನು ಗುರುತಿಸುವುದಕ್ಕಾಗಿ ನಿಮಗಾಗಿ ತಾಳ್ಮೆಯಿಂದ ಕಾಯುತ್ತಾ ಇದ್ದಾನೆ. ಆತನ ಸನ್ನಿಧಿಯಲ್ಲಿ ನಮ್ಮ ಚಿಂತೆಗಳನ್ನು ಹಾಕಬೇಕೆಂದು ನಮಗೆ ಆಹ್ವಾನವನ್ನು ಕೊಡುತ್ತಾನೆ. ನಮ್ಮ ದುಃಖವನ್ನು ನಿರೀಕ್ಷೆಯಾಗಿ ಮಾರ್ಪಡಿಸುವುದಕ್ಕೆ ನಮಗೆ ಅನುಮತಿಯನ್ನು ಕೊಡುತ್ತಾನೆ. ಯೋಹಾನ 11:25 ಉಲ್ಲೇಖಿಸದ ಹಾಗೆ, **ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನನ್ನನ್ನು ನಂಬುವವನು ಸತ್ತರೂ ಬದುಕುವನು; ಮತ್ತು ಬದುಕುತ್ತಾ ನನ್ನನ್ನು ಪ್ರತಿಯೊಬ್ಬನೂ ಎಂದಿಗೂ ಸಾಯುವುದಿಲ್ಲ**, ಈ ವಾಗ್ದಾನವು ಕೇವಲ ಭವಿಷ್ಯಕ್ಕಾಗಿ ಮಾತ್ರವಲ್ಲ ನಾವು ಪ್ರತಿದಿನ ಎದುರಿಸುತ್ತಿರುವ ಸವಾಲುಗಳಿಗೆ.

## ದೇವರ ವಾಕ್ಯದ ಶಕ್ತಿ!

ಶಿಷ್ಯರು ತಮ್ಮ ಪಯಣವನ್ನು ಮುಂದು ವರಿಸುತ್ತಿರುವಾಗ, ಯೇಸುಕ್ರಿಸ್ತನು ದೇವರ ವಾಕ್ಯವನ್ನು ಅವರ ಮುಂದೆ ತೆರೆಯಲ್ಲಿಟ್ಟನು. ಮೋಶೆಯಿಂದ ಕೀರ್ತನೆಯವರೆಗೆ ಪ್ರತಿ ಪ್ರವಾದನೆಗಳು ತನ್ನ ಸಂಕಟ ಮತ್ತು ಅಂತಿಮ ವೈಭವವನ್ನು ಹೇಗೆ ತೋರಿಸುತ್ತದೆ ಎಂದು ಆತನು ಬಹಿರಂಗಪಡಿಸಿದನು. ಆ ಒಂದು ಆಳವಾದ ಸಂಭಾಷಣೆಯನ್ನು ಊಹಿಸಿಕೊಳ್ಳಿ. ಪ್ರತಿಯೊಂದು ಮಾತು, ಪ್ರತಿಯೊಂದು ಪ್ರವಾದನೆ, ಪ್ರತಿ ಮುನ್ಸೂಚನೆಯು ಇದ್ದಕ್ಕಿದ್ದಂತೆ ಜೀವಂತ ವಾಯಿತು. ನಂತರ ಶಿಷ್ಯರು ಉದ್ಗರಿಸಿದ್ದರಲ್ಲಿ ಆಶ್ಚರ್ಯವಿಲ್ಲ. **ಆಗ ಅವರು ಒಬ್ಬರಿಗೊಬ್ಬರು ಆತನು ದಾರಿಯಲ್ಲಿ ನಮ್ಮ ಸಂಗಡ ಮಾತಾಡಿದಾಗಲೂ ಗ್ರಂಥಗಳ ಅರ್ಥವನ್ನು ನಮಗೆ ಬಿಚ್ಚಿ ಹೇಳಿದಾಗಲೂ ನಮ್ಮ ಹೃದಯವು ನಮ್ಮಲ್ಲಿ ಕುದಿಯುತ್ತಲಿವೆ ಎಂದು ಹೇಳಿಕೊಂಡರು.** (ಲೂಕ 24:32).

## ಜೀವಿಸುವ ವಾಕ್ಯ ಮತ್ತು ಪುನರುತ್ಥಾನದ ವಾಗ್ದಾನ!

ಸತ್ಯವೇದವು ಹಿಂದಿನ ಅವಶೇಷವಲ್ಲ, ಸಜೀವವಾದದ್ದು, ಇಂದು ನಮ್ಮ ಹೃದಯದಲ್ಲಿ ಮಾತನಾಡುತ್ತಲೇ ಇರುವ ಸಕ್ರಿಯ ಮಾರ್ಗದರ್ಶಿ ಯಾಗಿದೆ. ನಾವು ನಮ್ಮನ್ನು ದೇವರ ವಾಕ್ಯದಲ್ಲಿ ಮುಳಗಿಸಿಕೊಂಡಾಗ, ನಮ್ಮ ಶಾಂತಿಗೆ ಧಕ್ಕೆ ತರುವ ಅನುಮಾನಗಳು ಮತ್ತು ಭಯಗಳನ್ನು ಮೌನಗೊಳಿಸಲು ನಾವು ದೇವರ ಸತ್ಯವನ್ನು ಆಹ್ವಾನಿಸುತ್ತೇವೆ. ಶಿಷ್ಯರಿಗೆ ಯೇಸುವಿನ ದೈಹಿಕ ಪ್ರಸನ್ನತೆಯ ರುಜುವಾತ ಬೇಕಾಗಿರಲಿಲ್ಲ. ಆತನ ವಾಕ್ಯವನ್ನು ಅರ್ಥಮಾಡಿ ಕೊಳ್ಳುವುದರಿಂದ ಶಂಕಿಸುವ ಪ್ರಕಾಶವು ಅವರಿಗೆ ಬೇಕಿತ್ತು. ಈ ಪ್ರಕಾಶವು ಅವರ ಹತಾಶೆಯನ್ನು ಚುಚ್ಚಿದಾಗ, ಅವರ ಹೃದಯಗಳು ಹೊಸ ಭರವಸೆಯಿಂದ ಸುಟ್ಟು ಹೋದವು.

ರೋಮ 6:4ನ್ನು ಗಮನಿಸಿ, ಹೀಗಿರಲಾಗಿ ನಾವು ದೀಕ್ಷಾ ಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವೆ. ಆದ್ದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು. ಈ ಒಂದು ಹೊಸ ಜೀವನವು ಪುನರುತ್ಥಾನದ ನಿರೀಕ್ಷೆಯ ಅಸ್ತಿವಾರದಲ್ಲಿ ಕಟ್ಟಲ್ಪಟ್ಟಿದೆ. ಈ ನಿರೀಕ್ಷೆಯು ನಮ್ಮ ಅಂತರಂಗವನ್ನು ಮಾರ್ಪಡಿಸುತ್ತದೆ. ಕರಾಳ ಕ್ಷಣಗಳಲ್ಲಿಯೂ ನಮ್ಮ ಅತ್ಮಗಳನ್ನು ನವೀಕರಿಸುವುದು.

## ಪುನರುತ್ಥಾನದ ವಾಗ್ದಾನ!

ಪುನರುತ್ಥಾನವು ಕೇವಲ ಈಸ್ಟರ್ ಮುಂಜಾನೆಗೆ ಸೀಮಿತವಾದ ಐತಿಹಾಸಿಕ ಘಟನೆಯಲ್ಲ; ಇದು ನಮ್ಮ ನಂಬಿಕೆಯ ಮೂಲಾಧಾರವಾಗಿದೆ ಮತ್ತು ಪಾಪ ಮತ್ತು ಸಾವಿನ ಮೇಲೆ ದೇವರ ಶಕ್ತಿಯ ಅಂತಿಮ ಪ್ರದರ್ಶನ ವಾಗಿದೆ. 1 ಕೊರಿಂಥ 15:20-22 ಪೌಲನು ಪ್ರಕಟಿಸುತ್ತಾನೆ. **"ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ; ನಿದ್ರೆ ಹೋದವರಲ್ಲಿ ಪ್ರಥಮ ಫಲವಾದನು. ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ ಮನುಷ್ಯನ ಮೂಲಕ ಸತ್ತವರಿಗೆ ಪುನರುತ್ಥಾನ ವುಂಟಾಗುವುದು. ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವ ರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು."** ಮರಣವು ಅಂತ್ಯವಲ್ಲವೆಂದು ಈ ಅದ್ಭುತವಾದ ಸತ್ಯವು ನಮಗೆ ಭರವಸೆಯನ್ನು ನೀಡುತ್ತದೆ. ನಮ್ಮ ಸಮಸ್ಯೆಗಳಾಗಲಿ ಅಥವಾ ಸೋಲ್‌ಗಳಾಗಲಿ.

ಸಮಾಧಿಯ ಮೇಲಿನ ಯೇಸುವಿನ ಗೆಲುವು ನಾವೂ ಸಹ ನಮ್ಮ ಸಂದರ್ಭಗಳಿಗಿಂತ ಮೇಲೇರುತ್ತೇವೆ ಎಂದು ಖಾತರಿಪಡಿಸುತ್ತದೆ. ಜೀವನದ ಸಂಕಷ್ಟಗಳು ನಮ್ಮ ಮೇಲೆ ಏರುವಾಗ, ನಮ್ಮ ದೃಷ್ಟಿಕೋನದಲ್ಲಿ ಪುನರುತ್ಥಾನವು ನಮಗೆ ಸ್ಥಳವನ್ನು ಬದಲಾಯಿಸುತ್ತದೆ. ನಮ್ಮ ಪ್ರಸ್ತುತ ಸಮಸ್ಯೆಗಳು ತಾತ್ಕಾಲಿಕ ಆದರೆ ನಿತ್ಯಜೀವದ ನಿರೀಕ್ಷೆಯು ಬದಲಾಗುವುದಿಲ್ಲ. ಇದು ನಮ್ಮ ನೋವನ್ನು ತಳ್ಳಿ

(6ನೇ ಪುಟಕ್ಕೆ)

GREAT COMMISSION PARTNERS
ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು



ಹಂಚುವುದು (ಗಲಾತ್ಯ. 6:2), ಪ್ರೋತ್ಸಾಹಿಸುವುದು (ರೋಮಾಪುರ. 12:13)
ತ್ವರಿತಗೊಳಿಸುವುದು (II ತಿಮೋಥಿ. 1:6)

## ಸ್ತುತಿ ಮತ್ತು ಪ್ರಾರ್ಥನಾ ಮನವಿಗಳು

### 19 ಎಪ್ರಿಲ್ 2025 ರಿಂದ 18 ಮೇ 2025 ರ ವರೆಗೆ

(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)

## ಈ ವಿಷಯಗಳಿಗಾಗಿ ದೇವರಿಗೆ ಸ್ತೋತ್ರವನ್ನು ಸಲ್ಲಿಸಿರಿ.

ಎಪ್ರಿಲ್ 19 : **ಸಂತ ಪೌಲ್ ಮೆಟ್ರಿಕ್ಯುಲೇಷನ್ ಶಾಲೆ ಮತ್ತು ನೆಹಮೀಯ ಸತ್ಯವೇದ ಕಾಲೇಜು**ಗಳ ಎಲ್ಲಾ ಚಟುವಟಿಕೆಗಳಲ್ಲಿ ಆತನ ನಡೆಸುವಿಕೆಗಾಗಿ.

ಎಪ್ರಿಲ್ 20 : ಅರ್ಹ ಮತ್ತು ಸಮರ್ಪಣೆಯ ಹೊಸ ಅಭ್ಯರ್ಥಿಗಳನ್ನು ನೇಮಕ ಮಾಡುವ ಸಾಮರ್ಥ್ಯದೊಂದಿಗೆ ನಮ್ಮ ಸಂಸ್ಥೆಯನ್ನು ಆಶೀರ್ವದಿಸಿದ್ದಾನೆ.

ಎಪ್ರಿಲ್ 21 : ನಮ್ಮ ಎಲ್ಲಾ ಸಹ ಸಂಪಾದಕರು ಜೀವಿತ ಮತ್ತು ಅವರ ಕುಟುಂಬಗಳಿಗಾಗಿ.

ಎಪ್ರಿಲ್ 22 : ನಮ್ಮ ಸಭೆಗಳ , ಭಾನುವಾರ ಶಾಲೆ, ಯೌವ್ವನಸ್ಥರ ಸೇವೆ ಮತ್ತು ದವಾಖಾನೆಯ ಹೊರ ಸೇವೆಗಳ ಮೇಲೆ ಆತನ ನಿರಂತರವಾದ ಆಶೀರ್ವಾದಕ್ಕಾಗಿ.

ಎಪ್ರಿಲ್ 23 : ನಮ್ಮ ಹಿರಿಯ ಸಭಾಪಾಲಕರಾದ ಸ್ಯಾಮ್ ಸೆಲ್ವರಾಜ್ ಮತ್ತು ಅವರ ಕುಟುಂಬವನ್ನು ಎಲ್ಲಾ ದುಷ್ಟಶಕ್ತಿಗಳಿಂದ ಸಂರಕ್ಷಿಸಿದಕ್ಕಾಗಿ.

ಎಪ್ರಿಲ್ 24 : ನಮ್ಮ ಸತ್ಯವೇದ **ದೂರ ಶಿಕ್ಷಣ ಕೋರ್ಸ್**ಗಳು ಮತ್ತು **ದೈವ ಶಾಸ್ತ್ರದ ಕೋರ್ಸ್**ಗಳ ಆತನ ದಯೆಗಾಗಿ.

ಎಪ್ರಿಲ್ 25 : ನಮ್ಮ ಸಂಸ್ಥೆಯ ನೌಕರರು ಮತ್ತು ಅವರ ಕುಟುಂಬಗಳನ್ನು ಆಶೀರ್ವದಿಸಿದ್ದಾನೆ, ಅವರ ಯೋಗಕ್ಷೇಮ ಮತ್ತು ರಕ್ಷಣೆಯನ್ನು ಖಾತರಿ ಪಡಿಸಿದ್ದಾನೆ.

ಎಪ್ರಿಲ್ 26 : ನಮ್ಮ ಹಿರಿಯ ಸಭಾಪಾಲಕರ ಮೂಲಕ ಹೊರಹೊಮ್ಮುವ ಪ್ರಬಲ ಸಾಕ್ಷಿಗಳು ಸ್ಯಾಮ್ ಸೆಲ್ವರಾಜ್‌ರವರ ಐದು ನಿಮಿಷಗಳ ಯುಟ್ಯೂಬ್ ಸಂದೇಶಗಳು.

ಎಪ್ರಿಲ್ 27 : 2024-25 ಹಣಕಾಸಿನ ವರ್ಷದಲ್ಲಿ ಆತನ ಒದಗಿಸುವಿಕೆ ಮತ್ತು ನಡೆಸುವಿಕೆಗಾಗಿ ದೇವರಿಗೆ ಸ್ತೋತ್ರವಾಗಲಿ.

ಎಪ್ರಿಲ್ 28 : ನಮ್ಮ ಪ್ರಕಟನೆಗಳಲ್ಲಿ ಆತನ ಹೇರಳವಾದ ಆಶೀರ್ವಾದ, ನಮ್ಮ ಮುದ್ರಣಾಲಯದಲ್ಲಿ 16 ಭಾಷೆಗಳು ಮುದ್ರಿಸಲಾಗಿ ಮತ್ತು ಸೇವಾ ಕ್ಷೇತ್ರಗಳಿಗೆ ವಿತರಿಸಲಾಗುವುದು.

ಎಪ್ರಿಲ್ 29 : ನಮ್ಮ ಪ್ರಾರ್ಥನಾ ಸಹಭಾಗಿಗಳು, ಚಂದಾ ಸಹಭಾಗಿಗಳು, ನಂಬಿಕೆಯ ಸಹಭಾಗಿಗಳು, ಆಜೀವ ಸಹಭಾಗಿಗಳು ಮತ್ತು ದೊಡ್ಡ ಆಜ್ಞೆಯ ಸಹಾಭಾಗಿಗಳು ಮತ್ತು ಅವರ ಕುಟುಂಬಗಳ ಮೇಲೆ ಆತನ ದಯೆಗಾಗಿ.

ಎಪ್ರಿಲ್ 30 : ನಮ್ಮ ಸಭೆಯ ಎಲ್ಲಾ ಚಟುವಟಿಕೆಗಳಲ್ಲಿ ಯುವಕರು ಕಾರ್ಯಗತ ಚಟುವಟಿಕೆಯಾಗುವಂತೆ ಅವರನ್ನು ಪ್ರೋತ್ಸಾಹಿಸುವುದು ಮತ್ತು ಸಶಕ್ತಗೊಳಿಸುವುದು.

ಮೇ 01 : ನಮ್ಮ ಸೇವಾಕ್ಷೇತ್ರಗಳ ಕೆಲಸಗಾರರ ಅಚಲವಾದ ಸಮರ್ಪಣೆಗಾಗಿ.

ಮೇ 02 : ಜಾಗತಿಕ ಅಶಾಂತಿ ಮತ್ತು ಯುದ್ಧದ ಬೆದರಿಕೆಯ ನಡುವೆಯು ಎಲ್ಲಾ ರಾಷ್ಟ್ರಗಳಿಗೆ ದೈವಿಕ ರಕ್ಷಣೆಗಾಗಿ.

ಮೇ 03 : ನಮ್ಮ ಕ್ರಿಸ್ತೀಯ ಸೇವೆಗಳ ಸ್ಥಿತಿಸ್ಥಾಪಕತ್ವ, ರಾಜಕೀಯ ಮತ್ತು ಧಾರ್ಮಿಕ ವಿರೋಧದ ನಡುವೆಯೂ ಹೊರತಾಗಿಯೂ ಅಭಿವೃದ್ಧಿ ಹೊಂದುತ್ತಿದೆ.

## ದಯಮಾಡಿ ಈ ವಿಷಯಗಳಿಗಾಗಿ ಪ್ರಾರ್ಥಿಸಿರಿ.

ಮೇ 04 : 2025-26 ಶೈಕ್ಷಣಿಕ ವರ್ಷಕ್ಕೆ ನಮ್ಮ ವಸತಿ ಮತ್ತು ಸಾಯಂಕಾಲದ **ನೆಹಮೀಯ ಸತ್ಯವೇದ ಕಾಲೇಜಿ**ಗೆ ಅರ್ಹ ವಿದ್ಯಾರ್ಥಿಗಳ ಪ್ರವೇಶಕ್ಕಾಗಿ.

ಮೇ 05 : ನಮ್ಮ **ಸಂತ ಪೌಲ್ ಮೆಟ್ರಿಕ್ಯುಲೇಷನ್ ಶಾಲೆ**ಗೆ 2025-26ರ ಶೈಕ್ಷಣಿಕ ವರ್ಷಕ್ಕೆ ಹೊಸ ವಿದ್ಯಾರ್ಥಿಗಳ ಪ್ರವೇಶಕ್ಕಾಗಿ.

ಮೇ 06 : ಪ್ರಪಂಚದ ಎಲ್ಲಾ ಸಭೆಗಳು ಆತ್ಮಗಳನ್ನು ಗೆಲ್ಲುವಂತೆ ಮತ್ತು ಉಜ್ಜೀವವನ್ನು ಅನುಭವಿಸುವಂತೆ.

ಮೇ 07 : ನಮ್ಮ ಸುವಾರ್ತೆ ಮುದ್ರಣಾಲಯವು ಮೃದು ಕಾರ್ಯನಿರ್ವಹಿಸುವದಕ್ಕಾಗಿ ಮತ್ತು ದೈನಂದಿನ ಕಾರ್ಯಗಳಿಗಾಗಿ.

ಮೇ 08 : ನಮ್ಮ ಸಂಸ್ಥೆಯ ಎಲ್ಲಾ ನೌಕರರಲ್ಲಿ ಐಕ್ಯತೆ ಮತ್ತು ಸಹಬಾಳ್ವೆಗಾಗಿ.

ಮೇ 09 : ನಮ್ಮ ಸಹಸಂಪಾದಕರು ಮತ್ತು ಅವರ ಕುಟುಂಬಗಳನ್ನು ದೇವರು ಆಶೀರ್ವದಿಸುವದಕ್ಕಾಗಿ.

ಮೇ 10 : ನಮ್ಮ ಸೇವೆಗಳ ಆರ್ಥಿಕ ಅಗತ್ಯತೆಗಳಿಗಾಗಿ.

ಮೇ 11 : ಸೇವೆಗಳ ಮತ್ತು ಮಿಶನರಿಗಳ ವಿರೋಧವಾಗಿ ನಡೆಯುವ ಹಿಂಸೆಗಳ ನಿಲ್ಲುವಿಕೆಗಾಗಿ.

ಮೇ 12 : ಉತ್ತರ ಭಾರತದಲ್ಲಿರುವ ದೇವರ ಸೇವಕರುಗಳು ಮತ್ತು ಮಿಶನರಿಗಳ ಮತ್ತು ಅವರ ಕುಟುಂಬಗಳ ಒಳ್ಳೆಯ ಆರೋಗ್ಯಕ್ಕಾಗಿ ಮತ್ತು ಶಕ್ತಿಗಾಗಿ.

ಮೇ 13 : ಪ್ರಪಂಚದ ಮೇಲೆ ಪರಿಣಾಮ ಬರುವ ತೀವ್ರ ಹವಾಮಾನ ಪರಿಸ್ಥಿತಿಗಳ ವಿರುದ್ಧ ದೈವಿಕ ರಕ್ಷಣೆಗಾಗಿ.

ಮೇ 14 : ನಿಸ್ವಾರ್ಥವಾಗಿ ತಮ್ಮ ಮಕ್ಕಳನ್ನು ಪೋಷಿಸುವ ಮತ್ತು ಬೆಳೆಸುವ ತಾಯಂದಿರಿಗಾಗಿ.

ಮೇ 15 : ವಿಶ್ವಾದ್ಯಂತ ರೋಗಿಗಳು ದೀರ್ಘ ಆಸ್ಪತ್ರೆಯ ತಂಗುವಿಕೆಗಳು ಮತ್ತು ಕಾಯಿಲೆಗಳಿಗಾಗಿ.

ಮೇ 16 : ತಾಜ ದರ್ಶನಗಳು ಮತ್ತು ಭೂಮಿಯ ಮೇಲೆ ತನ್ನ ರಾಜ್ಯವನ್ನು ಮುನ್ನೆಡಸಲು ಮಾರ್ಗದರ್ಶನಕ್ಕಾಗಿ.

ಮೇ 17 : ಧೈರ್ಯ ಮತ್ತು ತಲ್‌ದೇ ಇರುವ ಪ್ರದೇಶಗಳಿಗೆ ಸುವಾರ್ತೆಯನ್ನು ಹಂಚುವ ಅವಕಾಶಗಳಿಗಾಗಿ.

ಮೇ 18 : ನಮ್ಮ ಸೇವೆಗಳು ಅನೇಕ ವಿಧಗಳಲ್ಲಿ ಬೆಳವಣಿಗೆ ಮತ್ತು ವಿಸ್ತಾರವಾಗುವಂತೆ.

*(4ನೇ ಪುಟದಿಂದ)*

ಹಾಕುವ ಕರೆ ಅಲ್ಲ. ಆದರೆ ಕ್ರಿಸ್ತನ ವಿಜಯೋತ್ಸವದ ಮಸೂರದ ಮೂಲಕ ಅದನ್ನು ನೋಡುವ ಆಹ್ವಾನವಾಗಿದೆ. ಆತನಲ್ಲಿ ಮಾತ್ರ ನಾವು ಸಹಿಸಿಕೊಳ್ಳುವ ಶಕ್ತಿಯನ್ನು ಪಡೆದುಕೊಳ್ಳುತ್ತೇವೆ. ನಿರೀಕ್ಷೆಯ ಧೈರ್ಯ, ನಾವು ನೋಡುವುದನ್ನು ಮೀರಿ ಭವಿಷ್ಯದ ಭರವಸೆ.

## ಸಂಕಷ್ಟಗಳ ಮಧ್ಯೆ ನಿರೀಕ್ಷೆ!

ಪುನರುತ್ಥಾನದ ಬೆಳಕಿನಲ್ಲಿ ಬದುಕುವುದು ನಿರೀಕ್ಷೆಯ ಜೀವನವು ಸವಾಲುಗಳಿಂದ ಮುಕ್ತವಾಗಿರುತ್ತದೆ ಎಂದು ಅರ್ಥವಲ್ಲ. ಅಪೋಸ್ತಲನಾದ ಪೌಲ್‌ನು ರೋಮ 8:18ರಲ್ಲಿ ನಮಗೆ ಜ್ಞಾಪಕಪಡಿಸುತ್ತಾನೆ. ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮೆ ಪದವಿಯನ್ನು ಆಲೋಚಿಸಿ ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ ಎಂದು ಎಣಿಸುತ್ತೇವೆ. ನಮ್ಮ ಹಾದಿಗಳು ಎಷ್ಟೇ ನೋವಿನಿಂದ ಕೂಡಿದ್ದರೂ ಅವು ನಮಗೆ ಭರವಸೆ ನೀಡಿದ ಶಾಶ್ವತ ಮಹಿಮೆಯ ಬೆಳಕಿನಲ್ಲಿ ತಾತ್ಕಾಲಿಕವಾಗಿರುತ್ತವೆ.

ನಮ್ಮ ಹೋರಾಟಗಳು ಮಣ್ಣಾಗಿ ಕಾರ್ಯನಿರ್ವಹಿಸುತ್ತವೆ. ಇದರಲ್ಲಿ ನಮ್ಮ ನಂಬಿಕೆ ಬೇರುಬಿಟ್ಟು ಬೆಳೆಯುತ್ತದೆ. ಯಾಕೋಬ 1:2-4 ನಮಗೆ ಪ್ರೋತ್ಸಾಹಿಸುತ್ತದೆ. ನನ್ನ ಸಹೋದರರೇ, ನಿಮ್ಮ ನಂಬಿಕೆಗೆ ಆಗುವ ಪರಿಶೋಧನೆಯು ತಾಳ್ಮೆಯನ್ನುಂಟು ಮಾಡುತ್ತದೆಂದು ತಿಳಿದು ನೀವು ನಾನಾ ವಿಧವಾದ ಕಷ್ಟಗಳಲ್ಲಿ ಬಿದ್ದಿರುವಾಗ ಅದನ್ನು ಕೇವಲ ಆನಂದಕರವಾದದ್ದೆಂದು ಎಣಿಸಿರಿ. ತಾಳ್ಮೆಯು ಸಿದ್ಧಿಗೆ ಬರಲಿ. ಆಗ ನೀವು ಶಿಕ್ಷಿತರೂ ಸರ್ವ ಸುಗುಣವುಳ್ಳವರೂ ಏನು ಕಡಿಮೆಯಿಲ್ಲದವರೂ ಆಗಿರುವಿರಿ. ಪುನರುತ್ಥಾನದ ನಿರೀಕ್ಷೆಯೊಂದಿಗೆ ನಾವು ಕಷ್ಟಗಳನ್ನು ಸಹಿಸಿಕೊಂಡಾಗ ನಮ್ಮೊಳಗಿನ ಒಂದು ಶಕ್ತಿಯನ್ನು ನಾವು ಬಹಿರಂಗಪಡಿಸುತ್ತೇವೆ ಎಂದು ನಮಗೆ ತಿಳಿದಿಲ್ಲ.

## ನಿರೀಕ್ಷೆಯ ನಿಜ ಜೀವನದ ಕಥೆ ಪುನಃ ಸ್ಥಾಪಿಸಿತು!

ಆಗಾದ ನಷ್ಟದ ಮಧ್ಯೆ ಹೊಸ ನಿರೀಕ್ಷೆಯನ್ನು ಕಂಡುಕೊಂಡ ವ್ಯಕ್ತಿಗಳ ಖಾತೆಗಳಿಂದ ಇತಿಹಾಸವು ತುಂಬಿದೆ. ಅಂತಹ ಒಂದು ಕಥೆಯೆಂದರೆ ಹೊರಾಶಿಯೋ ಸ್ಪಾಫೋರ್ಡ್, ಸಹಿಸಲಾಗದ ದುಃಖವನ್ನು ಸಹಿಸಿಕೊಂಡ ವ್ಯಕ್ತಿ. 1873ರಲ್ಲಿ ತನ್ನ ನಾಲ್ಕು ಹೆಣ್ಣುಮಕ್ಕಳನ್ನು ದುರಂತ ಹಡಗಿನಲ್ಲಿ ಕಳೆದುಕೊಂಡನು. ತನ್ನ ದುಃಖದ ಆಳವು ವಿವರಿಸಲಾಗದು. ಆದರೂ, ಆತನ ಹತಾಶೆಯಲ್ಲಿಯೂ ಸಹ, ಅವನು ಕ್ರಿಸ್ತನಲ್ಲಿರುವ ನಿರೀಕ್ಷೆಗೆ ಅಂಟಿಕೊಂಡನು.

ತನ್ನ ದುಃಖಿತ ಹೆಂಡತಿಯೊಂದಿಗೆ ಮತ್ತೆ ಒಂದಾಗಲು ಅವನು ಪ್ರಯಾಣಿಸುತ್ತಿದ್ದಾಗ, ಸ್ಪಾಫೋರ್ಡ್ ತನ್ನ ಹೆಣ್ಣು ಮಕ್ಕಳು ಮುಳುಗಿದ ಸ್ಥಳವನ್ನು ಹಾದು ಹೋದನು. ಅಲ್ಲಿ ದುಃಖದ ಮಧ್ಯೆ, ಅವರು ಈ ಮಾತುಗಳನ್ನು ಪ್ರೀತಿಯ ಸ್ತೋತ್ರಕ್ಕೆ ಬರೆದಿದ್ದಾರೆ.ಇದು ನನ್ನ ಆತ್ಮದೊಂದಿಗೆ ಚೆನ್ನಾಗಿರುತ್ತದೆ.

ಆಳವಾದ ನಷ್ಟಕ್ಕೆ ಸ್ಪಾಫೋರ್ಡ್ ಪ್ರತಿಕ್ರಿಯೆಯು ಎಮ್ಮಾವು ಶಿಷ್ಯರ ಪ್ರಯಾಣವನ್ನು ಪ್ರತಿಬಿಂಬಿಸುತ್ತದೆ. ಆತನ ಹೃದಯವು ಚೂರುಚೂರಾಗಿದ್ದರೂ, ಆತನ ನಂಬಿಕೆಯು ಮುರಿಯದೆ ಉಳಿದಿದೆ. ದುಃಖವು ಅನಿವಾರ್ಯ ಎಂದು ಆತನು ಅರ್ಥಮಾಡಿಕೊಂಡನು. ಹತಾಶೆ ಅಂತಿಮ ಮಾತು ಆಗಿರಬೇಕಾಗಿಲ್ಲ. ರೊಟ್ಟಿ ಮುರಿಯುವ ಸಮಯದಲ್ಲಿ ಶಿಷ್ಯರು ಯೇಸುವನ್ನು ಗುರುತಿಸಿದ ಹಾಗೆ ಸ್ಪಾಫೋರ್ಡ್ ಸಮಾಧಾನವನ್ನು ಅನುಭವಿಸಿದನು ಮತ್ತು ಪುನರುತ್ಥಾನ ಹೊಂದಿದ ಕ್ರಿಸ್ತನ ಪ್ರಸನ್ನತೆಯನ್ನು ಪುನಃ ಸ್ಥಾಪಿಸಲಾಯಿತು. ಅಂಧಕಾರದ ಸನ್ನಿವೇಶಗಳಲ್ಲಿ ಕೂಡ.

## ಆತನ ವಿಜಯದ ಬೆಳಕಿನಲ್ಲಿ ವಾಸಿಸುವುದು!

ಪುನರುತ್ಥಾನವು ಮರಣದ ಮೇಲಿನ ವಿಜಯಕ್ಕಿಂತ ಹೆಚ್ಚಿನದಾಗಿದೆ. ಇದು ನಮ್ಮ ಜೀವನವನ್ನು ಪುನಃ ಪಡೆದುಕೊಳ್ಳಲು ಆಹ್ವಾನವಾಗಿದೆ. ರೋಮ 8:37 ಘೋಷಿಸುತ್ತದೆ. ಆದರೆ ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ. ಇದು ಪುನರುತ್ಥಾನ ನಿರೀಕ್ಷೆಯ ಪರಿವರ್ತನೆಯ ಶಕ್ತಿ. ಇದು ಜೀವನದ ಸವಾಲುಗಳನ್ನು ಎದುರಿಸಲು ನಮ್ಮನ್ನು ಬಲಪಡಿಸುತ್ತದೆ. ನಮ್ಮ ಹೋರಾಟಗಳಿಂದ ನಾವು ವ್ಯಾಖ್ಯಾನಿಸಲ್ಪಟ್ಟ ಆದರೆ ಕ್ರಿಸ್ತನ ಪ್ರೀತಿ ಮತ್ತು ವಿಜಯದಿಂದ ನಾವು ವ್ಯಾಖ್ಯಾನಿಸಲ್ಪಟ್ಟಿಲ್ಲ ಎಂದು ನೆನಪಿಸುತ್ತದೆ. ಈ ಬೆಳಕಿನಲ್ಲಿ ಬದುಕುವುದು ಪ್ರತಿ ಪ್ರಯೋಗಕ್ಕೂ ಒಂದು ಉದ್ದೇಶವಿದೆ ಮತ್ತು ಪ್ರತಿ ದುಃಖವನ್ನು ಪುನಃ ಪಡೆದುಕೊಳ್ಳಬಹುದು ಎಂದು ನಂಬುವುದು. ಧೈರ್ಯದಿಂದ ನಡೆಯಲು, ಕೃಪೆಯನ್ನು ವಿಸ್ತರಿಸಲು ಮತ್ತು ಯೇಸುವನ್ನು ಸತ್ತವರಿಂದ ಬೆಳೆಸಿ ಅದೇ ಶಕ್ತಿಯು ನಮ್ಮೊಳಗೆ ವಾಸಿಸುತ್ತದೆ ಎಂಬ ಸತ್ಯವನ್ನು ಸ್ವೀಕರಿಸಸಲು ಇದು ನಮ್ಮನ್ನು ನಡೆಸುತ್ತದೆ. ಇದರರ್ಥ ನಮ್ಮ ಜೀವನವನ್ನು ಜೀವಂತ ಸಾಕ್ಷ್ಯಗಳಾಗಿರಲು ಅನುಮತಿಸುವುದು, ಅದು ಎಷ್ಟು ದುರ್ಬಲವಾಗಿ ಪುನಃ ಸ್ಥಾಪಿಸಬಹುದು ಮತ್ತು ನವೀಕರಿಸಬಹುದು ಎಂದು ಭಾವಿಸುತ್ತೇವೆ.

## ನವೀಕರಿಸಿದ ನಿರೀಕ್ಷೆಗೆ ಕರೆ!

ಎಮ್ಮಾಹುವಿನ ಕಥೆಯು ಇತಿಹಾಸದ ದಾಖಲೆಗಿಂತ ಹೆಚ್ಚಾಗಿದೆ. ಇದು ಪ್ರತಿಯೊಬ್ಬರಿಗೆ ವ್ಯಕ್ತಿಗತವಾದ ಕರೆಯುವಿಕೆಯಾಗಿದೆ. ಅನುಮಾನ ಮತ್ತು ಹತಾಶೆಯ ಕ್ಷಣಗಳಲ್ಲಿ ಸಹ, ಯೇಸು ನಮ್ಮ ಪಕ್ಕದಲ್ಲಿ ನಡೆಯುತ್ತಾನೆ ಎಂದು ನಮಗೆ ನೆನಪಿಸುತ್ತದೆ. ಆತನ ದೀನತೆಯ ಪ್ರಸನ್ನತೆಯು ಶಿಲುಬೆಯು ಅಂತ್ಯವಲ್ಲ ಎಂಬುದನ್ನು ನಮಗೆ ಮರುನಿರೀಕ್ಷೆಯನ್ನು ತರುತ್ತದೆ. ಅಥವಾ ನಮ್ಮ ಪ್ರಸ್ತುತ ಹೋರಾಟಗಳು.

*ಆದ್ದರಿಂದ ನಾನು ನಿಮಗೆ ಕೇಳುತ್ತೇನೆ :*

ಈ ಹೊತ್ತು ನೀವು ಯಾವ ಭಾರವನ್ನು ಹೊತ್ತುಕೊಂಡಿದ್ದೀರಿ? ನಿಮ್ಮ ಸವಾಲುಗಳ ಮೂಲಕ ನಿಮ್ಮೊಂದಿಗೆ ನಡೆಯಲು ನೀವು ಯೇಸುವನ್ನು ಆಹ್ವಾನಿಸಿದ್ದೀರಾ?


ECHO OF HIS CALL 1969-2019 REACHING NATIONS

**NEHEMIAH BIBLE COLLEGES,**

Chepauk & Santhoshapuram, Velachery Chennai.

Qualification : 10th Standard & above

Rush for admission! Medium :Tamil (Part Time)

Hindi (Residential) (Sponsorship Available)

Diploma in Theology

Recognised by International Christian Leaders & Senior Pastors for the past 55 years

Contact : The Chairman, Nehemiah Bible College.

10, MOHAMMED ABDULLAH 2ND STREET, CHEPAUK, CHENNAI - 600 005, INDIA.

Phone : (+91-44) 2852 8282, Cell : (+91) 98410 71852 / 95661 31858

E.mail : sam@echoofhiscall.org / Website : www.echoofhiscall.org

ನಿಮ್ಮ ಭಾವನೆಗಳನ್ನು ನಮ್ಮ ನಂಬಿಕೆಯನ್ನು ರೂಪಿಸಲು ನೀವು ಅವಕಾಶ ನೀಡುತ್ತೀರಾ ಅಥವಾ ದೇವರ ವಾಕ್ಯವು ಬದಲಾಗದ ಸತ್ಯದ ಮೇಲೆ ನೀವು ದೃಢವಾಗಿ ನಿಂತಿದ್ದೀರಾ?

ಈ ಒಂದು ಈಸ್ಟರ್, ಹತಾಶೆಯಿಂದ ಭರವಸೆಯವರೆಗೆ ಅನುಮಾನದಿಂದ ನಂಬಿಕೆಗೆ ಚಲಿಸಲು ನೀವು ಆಯ್ಕೆ ಮಾಡಿತ್ತೀರಾ?

ನೀವು ಒಂದು ಬೆಳಕನ್ನು ನೋಡುವುದಕ್ಕೆ ಕಷ್ಟ ಪಡುತ್ತಿದ್ದರೆ, ಒಂದು ಕ್ಷಣ ಸಮಯ ತೆಗೆದು ಕೊಂಡು ಪ್ರಾರ್ಥಿಸಿರಿ. ನಿಮ್ಮ ಸಂಘರ್ಷಗಳಿಗೆ ಯೇಸುವನ್ನು ಆಹ್ವಾನಿಸಿರಿ. ತನ್ನ ಶಿಷ್ಯರೊಂದಿಗೆ ನಡೆದ ಹಾಗೆ, ನಿಮ್ಮ ಸತ್ಯವೇದವನ್ನು ತೆಗೆದು ಯೋಹಾನ 11:-25-26 ಮತ್ತು 1 ಕೋರಿಂಥ 15:20-22 ಈ ವಾಕ್ಯಭಾಗವನ್ನು ಧ್ಯಾನ ಮಾಡಿರಿ. ಈ ಒಂದು ವಾಕ್ಯಗಳು ಆತನು ಪುನರುತ್ಥಾನ ಮತ್ತು ಜೀವ ವಾಗಿದ್ದಾನೆ ಎಂದು ನಿಮಗೆ ಭರವಸೆಯನ್ನು ನೀಡಲಿ. ನಿಮ್ಮ ದುಃಖವು ಎಷ್ಟೇ ಆಳವಾಗಿದ್ದರೂ, ಆತನು ಸಂತೋಷವು ಯಾವಾಗಲೂ ಇರುತ್ತದೆ. ಆತನ ಪ್ರೀತಿಗೆ ಯಾವುದೇ ಮಿತಿಯಿಲ್ಲ.

## ಪುನರುತ್ಥಾನದ ಮೂಲಕ ಮಾರ್ಪಟು ಹೊಂದಿದ ಜೀವನವನ್ನು ಅಪ್ಪಿಕೊಳ್ಳುವುದು!

ಪುನರುತ್ಥಾನದೊಂದಿಗೆ ಬದುಕುವುದು ಭವಿಷ್ಯದ ಭರವಸೆಯನ್ನು ನಂಬುವುದಕ್ಕಿಂತ ಹೆಚ್ಚಿನದಾಗಿದೆ. ನಿಮ್ಮ ದೈನಂದಿನ ಜೀವನವನ್ನು ರೂಪಿಸಲು ಮತ್ತು ಪರಿವರ್ತಿಸಲು ಆ ಭರವಸೆಯನ್ನು ಅನುಮತಿಸುವ ಬಗ್ಗೆ. ಇದರರ್ಥ ಅಸ್ಪಷ್ಟವಾಗಿ ಮುಂದಿನ ಹಾದಿಯು ಅಸ್ಪಷ್ಟ ವಾದಾಗಲೂ ಆಳವಾದ ಗಾಯಗಳ ಹೊರತಾಗಿಯೂ ಕ್ಷಮೆಯನ್ನು ಅರಿಸುವುದು ಮತ್ತು ಅದು ಅಸಾಧ್ಯವೆಂದು ಭಾವಿಸಿದಾಗಲೂ ಪ್ರೀತಿಸುವುದು.

ರೋಮ 12:2ರಲ್ಲಿ ಪೌಲ್‌ನು ನಮಗೆ ಜ್ಞಾಪಕ ಪಡಿಸುತ್ತಾನೆ. **ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿ ಕೊಂಡು ಪರಲೋಕ ಭಾವದವರಾಗಿರಿ.** ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದ ಅದೇ ಶಕ್ತಿಯು ನಮ್ಮ ಹೃದಯವನ್ನು ಬದಲಾಯಿಸುವುದ, ನಮ್ಮ ಆತ್ಮಗಳನ್ನು ಬಲ ಪಡಿಸುವುದು ಮತ್ತು ಜೀವನದ ಬಗೆಗಿನ ನಮ್ಮ ದೃಷ್ಟಿಕೋನವನ್ನು ಮರು ವ್ಯಾಖ್ಯಾನಿಸುತ್ತದೆ ಎಂದು ನಾವು ಗುರುತಿಸಿದಾಗ ಈ ನವೀಕರಣ ಪ್ರಾರಂಭವಾಗುತ್ತದೆ.

ಪ್ರತಿಯೊಂದು ಕಷ್ಟಗಳ ತಾತ್ಕಲಿಕ ಎಂದು ನೀವು ನಿಜವಾಗಿಯೂ ನಂಬಿದರೆ ನೀವು ಎಷ್ಟು ವಿಭಿನ್ನವಾಗಿ ಸವಾಲುಗಳನ್ನು ಎದುರಿಸಬಹುದು ಎಂದು ಊಹಿಸಿ. ಪ್ರತಿ ಹಿನ್ನಡೆ ಬೆಳವಣಿಗೆಗೆ ಒಂದು ಅವಕಾಶ ಮತ್ತು ಪ್ರತಿ ಕಣ್ಣೀರು ಶಾಶ್ವತ ಸಂತೋಷದತ್ತ ಒಂದು ಮೆಟ್ಟಿಲು. ಇದು ಪುನರುತ್ಥಾನದ ಶಕ್ತಿಯ ನಿರೀಕ್ಷೆ ಯಾಗಿದೆ. ಇದು ಕ್ರಿಸ್ತನನ್ನು ತಿಳಿದುಕೊಳ್ಳುವದರಿಂದ ಮಾತ್ರ ಬರಬಹುದಾದ ಧೈರ್ಯ ನಮಗೆ ತುಂಬುತ್ತದೆ.

## ಪುನರುತ್ಥಾನ ನಿರೀಕ್ಷೆಯನ್ನು ಸ್ವೀಕರಿಸಲು ಪ್ರಾಯೋಗಿಕ ಹಂತಗಳು!

ನಾವು ಈಸ್ಟರ್‌ನ್ನು ಆಚರಣೆ ಮಾಡು ತ್ತಿರುವಾಗ ಮತ್ತು ವಾಗ್ದಾನದ ಹೊಸ ಜೀವನ. ನಿಮ್ಮ ದೈನಂದಿನ ನಡಿಗೆಯಲ್ಲಿ ಪುನರುತ್ಥಾನದ ನಿರೀಕ್ಷೆಯನ್ನು ಬೆಳೆಸಲು ಕೆಲವು ಮಾರ್ಗಗಳು ಇಲ್ಲಿವೆ :

### 1. ದೇವರ ವಾಕ್ಯದಲ್ಲಿ ನಿಮ್ಮನ್ನು ಮುಳುಗಿಸಿ :

ಪ್ರತಿದಿನ ಪತ್ಯೇಕವಾದ ಸಮಯವನ್ನು ದೇವರ ವಾಕ್ಯವನ್ನು ಓದುವದಕ್ಕೆ ಮತ್ತು ಧ್ಯಾನ ಮಾಡುವದಕ್ಕೆ ಸಮರ್ಪಿಸಿಕೊಳ್ಳಿರಿ. ಈ ಒಂದು ವಚನಗಳು, ರೋಮ 6:4, ಯೋಹಾನ 11:25-26 ಮತ್ತು 1 ಪೇತ್ರ 1:3 ನಿಮ್ಮ ಆತ್ಮವನ್ನು ಆತನ ವಾಗ್ದಾನಗಳಲ್ಲಿ ಲಂಗರು ಮಾಡಿಕೊಳ್ಳಿ.

### 2. ಪ್ರಾರ್ಥನೆಗಾಗಿ ನಿಮ್ಮನ್ನು ಸಮರ್ಪಿಸಿಕೊಳ್ಳಿ!

ಪ್ರಾಮಾಣಿಕತೆಯಲ್ಲಿ ತೊಡಗಿಸಿಕೊಳ್ಳಿ. ದೇವರೊಂದಿಗೆ ಹೃದಯಪೂರಕ ಸಂವಾದ. ನಿಮ್ಮ ಎಲ್ಲಾ ಚಿಂತೆಗಳನ್ನು ಆತನ ಮುಂದೆ ಹಾಕಿರಿ.

(9ನೇ ಪುಟಕ್ಕೆ)

## VERY URGENT NOTICE!




There may be some unavoidable difficulty in dispatching **Echo of His Call** by post in the very near future. Therefore, if you are really interested to receive **Echo of His Call** continuously, please send us your names, addresses, E.mail addresses and WhatsApp numbers through letters, E.mails, phone calls, WhatsApp or SMS messages immediately.

Please help us to serve you continuously.

**Our address:**

**ECHO OF HIS CALL,**
10, Mohammed Abdullah 2nd Street,
Chepauk, Chennai-600 005, India
Cell: (+91) 98412 71858 / 98410 71858
E.mail: sam@echoofhiscall.org


# URGENT NEED

## Teachers for

## ST. PAUL'S MATRICULATION SCHOOL,

**An *Echo of His Call* Institution**
**Vijayanagaram, Medavakkam, Chennai - 100.**

We need well qualified, experienced, dedicated, hard working and mission oriented Christians.
Apply with Bio-data to
E.mail: sam@echoofhiscall.org
WhatsApp: (+91) 98412 71858


## TAX EXEMPTION

Donations by any individual or organization from India to **Echo of His Call Educational Trust** are eligible for Income Tax exemption under Section 80G of the Income Tax Act. Official receipts will be issued for this purpose. Please make your Demand Drafts / Cheques / M.O. for such donations in favour of **Echo of His Call Educational Trust** and send to us, along with your Aadhar Number and PAN for getting Income Tax Exemption.

| | | |
|---|---|---|
| **Account Name** | : | **ECHO OF HIS CALL EDUCATIONAL TRUST** |
| **Account Number** | : | **1023 2923 805** |
| **Bank Name** | : | **STATE BANK OF INDIA** |
| **Branch** | : | **TRIPLICANE, CHENNAI - 600 005** |
| **IFSC Code** | : | **SBIN 0000249** |
| **SWIFT Code** | : | **SBI NIN BB 455** |



# ಹಳ್ಳದಿಂದ ಅರಮನೆಗೆ

# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಯಾರು ಓದುತ್ತಾರೋ ಅವರಿಗೆ ಅರ್ಥವಾಗಲಿ." (ಮತ್ತಾಯ 24:15)

**"ಅರಣ್ಯವನ್ನು ಕೆರೆಯಾಗಿಯೂ ಒಣನೆಲವನ್ನು ಬುಗ್ಗೆಗಳಾಗಿಯೂ ಮಾಡಿ ಕೀರ್ತನೆ" ಜ್ಞಾನೋಕ್ತಿಗಳು 107:35.**

1989ರಲ್ಲಿ, ನಾವು ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದೆವು ಮತ್ತು ಅಲ್ಲಿ ನಾವು ನಮ್ಮ ಸಭೆಯ ಆರಾಧನೆಯನ್ನು ನಡೆಸುತ್ತಿದ್ದೆವು. ಇದರ ಜೊತೆಗೆ, ಸಿ. ಎನ್. ಕೆ. ರಸ್ತೆಯಲ್ಲಿರುವ ಬಾಡಿಗೆ ಕಟ್ಟಡದಲ್ಲಿ ನಮ್ಮ ಪ್ರಾರ್ಥನೆ ಮತ್ತು ಸಲಹೆ ಕೇಂದ್ರವು ಕಾರ್ಯ ನಿರ್ವಹಿಸುತ್ತಿತ್ತು. ಆದಾಗ್ಯ, ಇಬ್ಬರೂ ಭೂಮಾಲಿಕರು ಅನಿರೀಕ್ಷಿತವಾಗಿ ತಮ್ಮ ಆವರಣವನ್ನು ತಕ್ಷಣ ಖಾಲಿ ಮಾಡಲು ನಮಗೆ ಆದೇಶಿಸಿದರು.

ಆ ಒಂದು ಸಮಯದಲ್ಲಿ, ನಾನು ಮತ್ತು ನನ್ನ ಹೆಂಡತಿಯು ಸರ್ಕಾರಿ ಸಿಬ್ಬಂದಿ ಯಾಗಿದ್ದೆವು. ನಮ್ಮ ಸ್ಥಿರ ಉದ್ಯೋಗದ ಹೊರತಾಗಿಯೂ, ನಮಗೆ ಸಾಕಷ್ಟು ಆರ್ಥಿಕ ಸಂಪನ್ಮೂಲಗಳು ಮತ್ತು ಮಾನವ ಬೆಂಬಲವಿರಲಿಲ್ಲ. ನಮ್ಮ ಬಹುತೇಕ ಆದಾಯವು ಕರ್ತನ ಅನೇಕ ವಿದದ ಸೇವೆಗಳಿಗೆ ಸಮರ್ಪಿಸಲ್ಪಟ್ಟಿದ್ದವು. ನಮ್ಮ ಮನೆಯನ್ನು, ಸಭೆಯನ್ನು, ಆತನ **ಕರೆಯ ಪ್ರತಿಧ್ವನಿ**ಯ ಕಛೇರಿಯನ್ನು ಬೇರೆ ಕಡೆಯಲ್ಲಿ ಸ್ಥಳಾಂತರಿಸುವದಕ್ಕೆ ನಮ್ಮ ಹತ್ತಿರ ಹಣವಿರಲಿಲ್ಲ. ಇದಲ್ಲದೆ, ನಮ್ಮ ಪರವಾಗಿ ಭೂಮಾಲೀಕರೊಂದಿಗೆ ಮಧ್ಯಸ್ಥಿಕೆ ವಹಿಸಲು ಯಾರು ಇರಲಿಲ್ಲ. ಈ ಕಷ್ಟಕರ ಪರಿಸ್ಥಿತಿಯಲ್ಲಿ ನಮ್ಮ ಇಬ್ಬರು ಚಿಕ್ಕಮಕ್ಕಳು ಸಹ ನಮ್ಮೊಂದಿಗೆ ಬಳಲುತ್ತಿದ್ದರು.

ಒಂದು ಮುಂಜಾನೆ, ಪರಿಹಾರದ ಹತಾಶೆಯಿಂದ, ನಾನು ಕಾಲ್ನಡಿಗೆಯಲ್ಲಿ ಹೊರಟೆ, ನನ್ನ ಮನೆ, ಸಭೆ, ಕಛೇರಿಗಾಗಿ ಸುಮಾರು ಎರಡು ತಾಸು ಹೊಸ ಸ್ಥಳವನ್ನು ಹುಡುವುದಕ್ಕಾಗಿ ಚೆಪಾಕ್ ಬದಿಯಲ್ಲಿ ತಿರುಗಾಡಿದೆನು. ಪ್ರತಿಯೊಂದು ಹೆಜ್ಜೆಯಲ್ಲಿ, ಆತನು ಒದಗಿಸುವನೆಂದು ಭರವಸೆಯಿಂದ ದೇವರಿಗೆ ಸ್ತೋತ್ರ ಮಾಡುತ್ತಿದ್ದೇನು. ದಾರಿಯಲ್ಲಿ ನಾನು ಎರಡು ಮನೆ ದಲ್ಲಾಳಿಗಳನ್ನು ಭೇಟಿಯಾಗಿ ನನ್ನ ತುರ್ತಾದ ಅಗತ್ಯವನ್ನು ಅವರಿಗೆ ನಾನು ತಿಳಿಸಿದೆನು. ಅವರು ಗಟ್ಟಿಯಾಗಿ ಪ್ರತಿಕ್ರಿಯಿಸಿದರು.

ಈ ಪ್ರದೇಶದಲ್ಲಿ ಯಾರು ನಿಮಗೆ ಬಾಡಿಗೆಯನ್ನು ಕೊಡುವುದಿಲ್ಲ ನೀವು ಜೋರಾಗಿ ಪ್ರಾರ್ಥಿಸುತ್ತೀರಿ. ಜೋರಾಗಿ ಹಗಲಲ್ಲಿಯೂ, ರಾತ್ರಿಯ ಹೊತ್ತು ಸಂಗೀತ ವಾದ್ಯಗಳೊಂದಿಗೆ ಹಾಡುತ್ತೀರಿ. ಇದರಿಂದ ನಮ್ಮ ದೇವರು ಮತ್ತು ದೇವತೆಗಳು ಕೋಪಗೊಳ್ಳುತ್ತವೆ. ಅವರ ಶಕ್ತಿಗಳು ಕಡಿಮೆಯಾಗುತ್ತವೆ. ಅದರ ಪರಿಣಾಮವಾಗಿ ನಾವು ಕಷ್ಟಗಳನ್ನು ಅನುಭವಿಸುತ್ತೇವೆ. ಅಡೆತಡೆಯಿಲ್ಲದೆ, ನಾನು ನಡೆಯುತ್ತಾ ಮುಂದುವರಿಸಿದೆ. ನನ್ನ ತಾಳ್ಮೆ ಮತ್ತು ನಿರೀಕ್ಷೆಯನ್ನು ಹಿಡಿದಿಟ್ಟುಕೊಂಡೆನು. ಆಮೇಲೆ ನಾವು ಒಬ್ಬ ರೋಮನ್ ಕ್ಯಾಥಿಲಿಕ್ ಸಹೋದರನನ್ನು ಭೇಟಿಯಾಗಿ, ನನ್ನ ಕಷ್ಟವನ್ನು ಆತನೊಂದಿಗೆ ಹಂಚಿಕೊಂಡೆನು. ಆತನು ಕೇಳಿಸಿಕೊಂಡು ಈ ರೀತಿಯಾಗಿ ಹೇಳಿದನು.

ಸಹೋದರ, ಅಲ್ಲಿ ಒಂದು ಹಳೆಯ ಮನೆಯು ಲಭ್ಯವಿದೆ. ಆದಾಗ್ಯೂ, ಅಲ್ಲಿ ವಾಸಿಸಲು ಯಾರೂ ಸಿದ್ಧರಿಲ್ಲ. ಯಾಕೆಂದರೆ ಅಲ್ಲಿ ಕಾಡುತ್ತಿದೆ ಎಂದು ಅವರು ನಂಬಿದ್ದಾರೆ. ಮುಂಚೆ ಇದ್ದ ಬಾಡಿಗೆದಾರರು ಅಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಲ್ಲಿ ದೆವ್ವಗಳು ವಾಸಮಾಡುತ್ತವೆ ಎಂದು ಜನರು ನಂಬಿದ್ದಾರೆ. ಆದರೆ ನೀವು ಪರಿಶುದ್ಧಾತ್ಮನಿಂದ ತುಂಬಲ್ಪಟ್ಟಿದ್ದರಿಂದ ಅಂತಹ ಆತ್ಮಗಳನ್ನು ನೀವು ತೆಗೆದುಹಾಕಬಹುದು. ನೀವು ಆ ಮನೆಯನ್ನು ಬಹಳ ಕಡಿಮೆ ದರದಲ್ಲಿ ಬಾಡಿಗೆಯನ್ನು ತೆಗೆದುಕೊಳ್ಳಬಹುದು.

ಆತನ ಮಾತುಗಳು ನನಗೆ ಸಂತೋಷ ಮತ್ತು ನಿರೀಕ್ಷೆಯನ್ನು ತಂದವು. ಆದಾಗ್ಯೂ, ಅಲ್ಲಿ ನನಗೆ ಒಂದು ದೊಡ್ಡ ಅಡೆತಡೆ ಇತ್ತು. ಮುಂಗಡವಾಗಿ ಕೊಡುವದಕ್ಕಾಗಿ ನನ್ನ ಹತ್ತಿರ ಐವತ್ತು ರೂಪಾಯಿ ಕೂಡ ಇರಲಿ.

ನಾನು ಹಿಂತುರುಗಿ ಮನೆಗೆ ಬಂದೆನು. ಮೊಣಕಾಲೂರಿ ಪರಲೋಕದ ತಂದೆಗೆ ಬಹಳ ಆಸಕ್ತಿಯಿಂದ ಪ್ರಾರ್ಥನೆ ಮಾಡಿದೆನು. ನಂಬಲಾಗದ ರೀತಿಯಲ್ಲಿ ದೇವರು ದೊಡ್ಡ ಅದ್ಭುತ ಕಾರ್ಯವನ್ನು ಮಾಡಿದನು.

ಮರುದಿನ, ಅನುದಿನದ ದಿನಪತ್ರಿಕೆಯಲ್ಲಿ ಒಂದು ಜಾಹಿರಾತು ನನಗೆ ಕಂಡಿತು. ಈ ರೀತಿಯಾಗಿ ಬರೆಯಲ್ಪಟ್ಟಿತ್ತು. ***"ವಸತಿ ಅಭಿವೃದ್ಧಿ ಹಣಕಾಸು ನಿಗಮ.*** ಸರ್ಕಾರದೊಂದಿಗಿನ ಒಡನಾಟ, ತಮ್ಮದೇ ಆದ ಮನೆಗಳನ್ನು ಖರೀದಿಸಲು ಶಾಶ್ವತ ಸರ್ಕಾರಿ ಅಧಿಕಾರಿಗಳಿಗೆ ಮುಂಗಡ ಪಾವತಿಗಳನ್ನು ನೀಡುವ ಯೋಜನೆಯನ್ನು ಪರಿಚಯಿಸಿದೆ. ಮೊದಲು ಬಂದ, ಮೊದಲು ಸೇವೆ ಸಲ್ಲಿಸಿದ ಆಧಾರದ ಮೇಲೆ ಸಹಾಯವನ್ನು ಒದಗಿಸಲಾಗುವುದು."

ಯಾವುದೇ ಅನುಮಾನವಿಲ್ಲದೆ ನನ್ನ ಕಛೇರಿಗೆ ತಕ್ಷಣವೇ ಅನ್ವಯಿಸಿದೆನು. ಸಾಮಾನ್ಯವಾಗಿ, ಅಂತಹ ಮುಂಗಡವನ್ನು ಮಂಜೂರು ಮಾಡಲು ಸುಮಾರು ಐದು ವರ್ಷಗಳು ಬೇಕಾಗುತ್ತದೆ. ಆದಾಗ್ಯೂ, ದೇವರ ಕೃಪೆಯಿಂದ, ನಾನು ಅಗತ್ಯವಾದ ಮೊತ್ತವನ್ನು ಗಮನಾರ್ಹವಾಗಿ ಅಲ್ಪಾವಧಿಯಲ್ಲಿ ಸ್ವೀಕರಿಸಿಕೊಂಡೆನು. ನನಗೆ ಆಶ್ಚರ್ಯವಾಯಿತು. ನಾನು ಹಣವನ್ನು ಸ್ವೀಕರಿಸಿದ ಕೂಡಲೇ ಯೋಜನೆಯನ್ನು ಹಿಂಪಡೆಯಲಾಯಿತು.

ಆ ಒಂದು ಮೊತ್ತದಿಂದ, ನಾವು ಹಳೆಯ ಮನೆಯೊಂದಿಗೆ ಒಂದು ತುಂಡು ಭೂಮಿಯನ್ನು ಖರೀದಿಸಿದೆವು. ಅದು ನಮ್ಮ ಹೊಸ ವಿಳಾಸವಾಯಿತು. ಆ ಒಂದು ಕಟ್ಟಡಕ್ಕೆ ನಮ್ಮ ಮನೆ, ಸಭೆ, ಕಛೇರಿಯನ್ನು ಸ್ಥಳಾಂತರಿಸಿದೆವು. ನಮ್ಮ ಭಯಕ್ಕೆ ವಿರೋಧವಾಗಿ, ನಾವು ಯಾವುದೇ ದೆವ್ವದ ಆತ್ಮಗಳನ್ನು ಇರುವಿಕೆಯ ಚಿಹ್ನೆಯನ್ನು ಹಾದು ಹೋಗಲ್ಲಿಲ್ಲ. ದೇವರು ಅದ್ಭುತ ರೀತಿಯಲ್ಲಿ ನಮಗೆ ಒದಗಿಸಿದನು. ನಮ್ಮ ಸಭೆಯನ್ನು ನೆಲಮಾಳಿಗೆಯಲ್ಲಿ ಸ್ಥಾಪಿಸಿದೆವು. ನಮ್ಮ ಮನೆಯು ಮೊದಲ ಹಸ್ತನಲ್ಲಿ, ನಮ್ಮ ಕಛೇರಿಯು ಎರಡನೆಯ ಮಾಳಿಗೆಯಲ್ಲಿ.

ಕೆಲವು ವರ್ಷಗಳ ನಂತರ, ಹಳೆಯ ಕಟ್ಟಡವನ್ನು ನಾಶ ಮಾಡಿ ಹೊಸ ಕಟ್ಟಡವನ್ನು ಕಟ್ಟುವಂತೆ ದೇವರು ನಮಗೆ ಸಹಾಯ ಮಾಡಿದನು. ಈ ಹೊತ್ತು ನಮ್ಮ ಸಭೆ, ಮುದ್ರಣಾಲಯ, ನಮ್ಮ ಮನೆಯು, ಕಛೇರಿಯು ಹೊಸ ಕಟ್ಟಡದಲ್ಲಿ ಇದೆ.

ನಾನು 1994ರಲ್ಲಿ ಸರ್ಕಾರಿ ಕೆಲಸದಿಂದ ನಿವೃತ್ತಿಯಾದ ಮೇಲೆ, ಯಾವುದೇ ಬಾಕಿ ಇಲ್ಲದೆ ಸಂಪೂರ್ಣ ಮೊತ್ತವನ್ನು ಮರುಪಾವತಿಸಲು ದೇವರು ನನಗೆ ಸಹಾಯ ಮಾಡಿದನು. ಈಗ ನಾನು ಸಂತೋಷವುಳ್ಳವನಾಗಿ ದೇವರ ಸೇವೆಯನ್ನು ಮಾಡುತ್ತಾ ಇದ್ದೇನೆ.

**ಯೆಹೋವನು ಸರ್ವೋತ್ತಮನೆಂದು ಅನುಭವದಿಂದ ತಿಳಿದುಕೊಳ್ಳಿರಿ!** ಕೀರ್ತನೆ 34:8

************

*(7ನೇ ಪುಟದಿಂದ)*

ನೀವು ಎಂದಿಗೂ ಏಕಾಂಗಿಯಲ್ಲ ಎಂದು ನಿಮಗೆ ಧೈರ್ಯ ತುಂಬುವ ಆತನ ಧ್ವನಿಯನ್ನು ಆಲಿಸಿರಿ.

## 3. ವಿಶ್ವಾಸಿಗಳ ಸಮುದಾಯವನ್ನು ಸೇರಿಸಿಕೊಳ್ಳಿರಿ !

ನಿಮ್ಮ ನಂಬಿಕೆ ಮತ್ತು ನಿರೀಕ್ಷೆಯನ್ನು ಹಂಚಿಕೊಳ್ಳುವವರೊಂದಿಗೆ ನಿಮ್ಮನ್ನು ಸುತ್ತುವರಿರಿ. ಸಂಗತಿಯಲ್ಲಿ ನಿಮ್ಮ ನಂಬಿಕೆಯು ಬಲಗೊಳ್ಳುತ್ತದೆ. ನಿಮ್ಮ ಜೀವನದಲ್ಲಿ ದೇವರ ಮಾರ್ಗದರ್ಶನಕೆಯ ಕೆಲಸದ ಸಾಕ್ಷಿಗಳನ್ನು ವಿನಿಮಯ ಮಾಡಿಕೊಳ್ಳುವಾಗ ನಿಮ್ಮ ನಂಬಿಕೆಯು ಆಳವಾಗಿ ನೆಲೆಗೊಳ್ಳುತ್ತದೆ.

## 4. ನಿಮ್ಮ ನಂಬಿಕೆಯಲ್ಲಿ ಜೀವಿಸಿರಿ !

ನಿಮ್ಮ ಅನುದಿನದ ಕ್ರಿಯೆಗಳಲ್ಲಿ ಪುನರುತ್ಥಾನದ ನಿರೀಕ್ಷೆಯು ನಿಮ್ಮನ್ನು ರೂಪಿಸಲಿ. ಕ್ಷಮಾಪಣೆಯ ಮುಂದುವರಿಕೆ. ಅಗತ್ಯಯಲ್ಲಿರುವವರಿಗೆ ದಯೆಯನ್ನು ತೋರಿಸುವುದು. ಅನಿಶ್ಚಿತತೆಯ ಹೊರತಾಗಿಯೂ ನಂಬಿಕೆಯಲ್ಲಿ ಹೆಜ್ಜೆ ಹಾಕುವುದು. ನಿಮ್ಮ ಜೀವನವು ಕ್ರಿಸ್ತನ ವಿಮೋಚಕ ಶಕ್ತಿಗೆ ಸಾಕ್ಷಿಯಾಗಲಿ.

## ಕೊನೆಯ ಪ್ರೋತ್ಸಾಹ

ಈ ಆಸ್ಟರ್‌ನಲ್ಲಿ, ದುಃಖದಿಂದ ಸಂತೋಷಕ್ಕೆ ಅನುಮಾನದಿಂದ ಅಚಲ ನಂಬಿಕೆಯವರೆಗೆ ಮತ್ತು ಹತಾಶೆಯಿಂದ ಎಂದಿಗೂ ವಿಫಲಗೊಳ್ಳದ ನಿರೀಕ್ಷೆಯವರೆಗೆ ನೀವು ಆಳವಾದ ರೂಪಾಂತರವನ್ನು ಅನುಭವಿಸಲಿ. ಯೇಸುವಿನ ಪುನರುತ್ಥಾನವು ಕೇವಲ ಐತಿಹಾಸಿಕ ಘಟನೆಯಲ್ಲ, ಇದು ನಮ್ಮ ನಂಬಿಕೆಯ ಅಸ್ತಿವಾರವಾಗಿದೆ. ರಾತ್ರಿ ಎಷ್ಟೇ ಕತ್ತಲೆಯಾಗಿದ್ದರೂ, ಆತನ ಬೆಳಕಿನ ಉದಯ ಶಾಶ್ವತವಾಗಿ ಹೊಳೆಯುತ್ತದೆ ಎಂದು ಘೋಷಣೆ ಮಾಡಿ.

ಈ ಪ್ರತಿಬಿಂಬದ ಸಮಯಯವನ್ನು ನೀವು ತೊರೆದಾಗ, ನಿಮ್ಮ ಪ್ರಯಾಣದ ಪ್ರತಿಯೊಂದು ಹಂತದಲ್ಲಿ ಯೇಸು ನಿಮ್ಮ ಪಕ್ಕದಲ್ಲಿ ನಡೆಯುತ್ತಾನೆ ಎಂಬ ಭರವಸೆಯನ್ನು ನಿಮ್ಮೊಂದಿಗೆ ಕೊಂಡೊಯ್ಯಿರಿ. ನಿಮ್ಮ ಎಲ್ಲಾ ಭಾರಗಳನ್ನು ಆತನ ಮೇಲೆ ಹಾಕುವದಕ್ಕೆ ಆತನು ಆಹ್ವಾನವನ್ನು ಕೊಡುತ್ತಾನೆ ಮತ್ತು ಆತನ ಪ್ರೀತಿ ಮತ್ತು ವಿಜಯದಿಂದ ನವೀಕರಿಸಲ್ಪಟ್ಟ ಜೀವನವನ್ನು ಸ್ವೀಕರಿಸಿ. ದೇವರ ವಾಕ್ಯದ ಶಕ್ತಿಗಾಗಿ ನಿಮ್ಮ ಹೃದಯವನ್ನು ತೆರೆಯಿರಿ. ನೀವು ಆತನ ಮೂಲಕ ವಿಜಯಶಾಲಿಗಳಿಗಿಂತ ಹೆಚ್ಚು ಎಂದು ತಿಳಿದುಕೊಂಡು ಪತ್ರಿದಿನ ಆತ್ಮವಿಶ್ವಾಸದಿಂದ ಎದುರಿಸುವ ಶಕ್ತಿಯನ್ನು ನೀವು ಕಂಡುಕೊಳ್ಳುವಿರಿ.

2 ಕೊರಿಂಥ 5:17 ನಿಮ್ಮೊಳಗೆ ಪ್ರತಿಧ್ವನಿಸುವ ವಾಕ್ಯಗಳು ಆಗಲಿ. ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು.ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು.

ಈಸ್ಟರ್ ಕೊಡುವ ಹೊಸಜೀವನವನ್ನು ಅಪ್ಪಿಕೊಳ್ಳಿರಿ. ಪುನರುತ್ಥಾನ ನಿರೀಕ್ಷೆಯು ನಿಮ್ಮ ಆಲೋಚನೆಗಳನ್ನು ಬೆಳಗಿಸಲಿ, ನಿಮ್ಮ ಕ್ರಿಯೆಗಳನ್ನು ಪ್ರೇರೇಪಿಸಲಿ ಮತ್ತು ಕ್ರಿಸ್ತನು ಮಾತ್ರ ಒದಗಿಸಬಲ್ಲ ಅಚಲವಾದ ಸಂತೋಷದಿಂದ ನಿಮ್ಮ ದಿನಗಳನ್ನು ತುಂಬಲಿ. ನಿಮ್ಮ ಜೀವನದ ಎಲ್ಲಾ ಪರಿಸ್ಥಿತಿಗಳಲ್ಲಿ ಯೇಸು ನಿಮ್ಮ ಹತ್ತಿರದಲ್ಲಿದ್ದಾನೆಂದು ತಿಳಿದುಕೊಳ್ಳಿರಿ. ನಿಮ್ಮ ಹೃದಯವನ್ನು ತೆರೆಯಿರಿ, ಆತನ ವಾಗ್ದಾನಗಳಲ್ಲಿ ನಂಬಿಕೆಯನ್ನು ಇಡಿರಿ. ಆತನು ನಿಮಗಾಗಿ ಸಿದ್ದ ಮಾಡಿದ ಹೊಸ ಜೀವನಕ್ಕೆ ಧೈರ್ಯವಾಗಿ ಹೆಜ್ಜೆಯನ್ನು ಹಾಕಿರಿ. ಈ ಒಂದು ನಿರೀಕ್ಷೆಯ ಸಂದೇಶವು ಪುನರುತ್ಥಾನದ ಶಕ್ತಿಯಲ್ಲಿ ಬೇರೂರಿದೆ. ನಿಮ್ಮ ಕತ್ತಲೆಯ ಕ್ಷಣಗಳಲ್ಲಿ ಬೆಳಕಿನ ದಾರಿದೀಪವಾಗಲಿ.

************

# ಗೌರವ



Pr. Alex Samson Sam

ಪಾ. ಸ್ಯಾಮ್ ಸೆಲ್ವರಾಜ್‌ರವರ ಒಬ್ಬನೇ ಮಗನಾದ, ನನ್ನ ಆತ್ಮೀಯ ಗೆಳೆಯನಾದ ಪಾ. ಅಲೆಕ್ಸ್ ಸ್ಯಾಮಸನ್ ಸ್ಯಾಮ್. ಫೆಬ್ರವರಿ, 13, 2025 ರಂದು ದೇವರ ರಾಜ್ಯಕ್ಕೆ ಪ್ರವೇಶಿಸಿದರು. ಆತನು ಇನ್ನು ಮುಂದೆ ನಮ್ಮೊಂದಿಗೆ ಇಲ್ಲದಿದ್ದರೂ, ಆತನ ಪರಂಪರೆ ನಮ್ಮ ಹೃದಯದಲ್ಲಿ ಉಳಿದಿದೆ. ಸಹೋದರ ಸ್ಯಾಮ್ ಸೆಲ್ವರಾಜ್, ಅವರ ಕುಟುಂಬ ಮತ್ತು ಆತನ **ಕರೆಯ ಪ್ರತಿಧ್ವನಿ**ಯ ಸೇವೆಗಳ ಸಂಪೂರ್ಣ ಸಿಬ್ಬಂದಿಗೆ ನಾವು ನಮ್ಮ ಆಳವಾದ ಸಂತಾಪವನ್ನು ವಿಸ್ತರಿಸುತ್ತೇವೆ.

ಪಾ. ಅಲೆಕ್ಸ್ ಸ್ಯಾಮಸನ್ ಸ್ಯಾಮ್‌ರವರು ಬಹಳ ದಯೆಯುಳ್ಳವರಾಗಿದ್ದರು. ಮರ್ಯಾದೆಯುಳ್ಳವರು ಮತ್ತು ಚೇತರಿಸಿಕೊಳ್ಳುವ ಮನುಷ್ಯನಾಗಿದ್ದನು. ಆತನ **ಕರೆಯ ಪ್ರತಿಧ್ವನಿ**ಯ ಸೇವೆಗಳಿಗೆ ಆತನ ಪ್ರೀತಿ ಮತ್ತು ಅಚಲ ನಂಬಿಕೆಯು ಅಸಂಖ್ಯಾತ ಯುವಕರನ್ನು ಸೆಳೆಯಿತು. ಅಂತರಾಷ್ಟ್ರೀಯ ಯೆಹೋಶುವ ವೀರರ ಸೇವೆಗೆ ಆತನ ಪ್ರಭಾವವು ನಿಂತಿದೆ. ಆತನು ಪೂರ್ಣ ಹೃದಯದಿಂದ ದೈವತ್ವದ ಕರೆಯನ್ನು ಅಪ್ಪಿಕೊಂಡಿದ್ದನು. ಆತನು ತನ್ನ 41 ವರ್ಷಗಳ ಜೀವನದ 30 ವರ್ಷಗಳನ್ನು ದೇವರ ಸಭಾಪಾಲಕನಾಗಿ ಸೇವೆ ಮಾಡಿ ಅರ್ಪಿಸಿಕೊಂಡನು. ಲೌಕಿಕ ಐಷಾರಾಮಿಗಳನ್ನು ಎಂದಿಗೂ ಹುಡುಕಲಿಲ್ಲ. ತ್ಯಾಗಪೂರಕವಾದ ಹೃದಯದಿಂದ ತನ್ನ ಸೇವೆಯನ್ನು ನಡೆಸಿಕೊಂಡು ಹೋದನು. ದೈಹಿಕ ಸಂಕಷ್ಟಗಳನ್ನು ಯಾವುದೇ ದೂರು ಇಲ್ಲದೆ ಸಹಿಸಿಕೊಂಡನು. ಆತನು ಜೀವನ ಮತ್ತು ಮರಣದ ಅದ್ಭುತ ಸತ್ಯಗಳನ್ನು ಅರ್ಥ ಮಾಡಿಕೊಂಡಿದ್ದನು.

***ಸಾವಿಗೆ ಸಂಕೋಚ ಪಡದವನು ವಿಜಯಶಾಲಿಯಾಗುತ್ತಾನೆ.***
***ನಿಜವಾದ ಜಯಶಾಲಿಗೆ ಯಾವುದೇ ಭಯವಿಲ್ಲ.***
***ನಂಬಿಕೆಯಲ್ಲಿ ನಡೆಯುವವರಿಗೆ, ಮರಣವು ಅವರ ಮೇಲೆ ಯಾವುದೇ ಆಳ್ವಿಕೆ ಮಾಡುವುದಿಲ್ಲ.***

ಅನೇಕರು ಜೀವನದ ಫಲವನ್ನು ಆನಂದಿಸಲು ಹುಟ್ಟಿರುತ್ತಾರೆ. ಪಾ.ಅಲೆಕ್ಸ್ ರವರು ಭಕ್ತಿ ಮತ್ತು ಸ್ವ ನಿರಾಕರಣೆಯ ದಾರಿಯನ್ನು ಆರಿಸಿಕೊಂಡರು. ಆತನ ಅಚಲವಾದ ನಂಬಿಕೆಯಿಂದ, ದೇವರು ಅತನನ್ನು ಹೇರಳವಾಗಿ ಆಶೀರ್ವದಿಸಿದನು ಮತ್ತು ಆತನ ಜೊತೆಯಲ್ಲಿ ಅತನಿಗೆ ಸ್ಥಳವನ್ನು ಕೊಟ್ಟನು. ಭೂಮಿಯ ಮೇಲೆ ಮತ್ತು ಪರಲೋಕದಲ್ಲಿ ದೈವಿಕ ನ್ಯಾಯಕ್ಕೆ ಸಾಕ್ಷಿಯಾಗಿದೆ. ಆತನ ಸ್ಮರಣೆಯನ್ನು ದುಃಖದಿಂದಲೂ ಆದರೆ ಅಚಲ ಹೃದಯಗಳಿಂದ ಗೌರವಿಸೋಣ. ನಾವು ಆತನಿಗೆ ನೀಡಬಹುದಾದ ದೊಡ್ಡ ಗೌರವ ಯಾವುದೆಂದರೆ ಆತನ **ಕರೆಯ ಪ್ರತಿಧ್ವನಿ**ಯ ಸೇವೆಯನ್ನು ಅಚಲವಾದ ಬದ್ದತೆಯೊಂದಿಗೆ ಮುಂದುವರಿಸುವುದು, ಆತನ ಆತ್ಮವು ನಮ್ಮೊಂದಿಗೆ ಉಳಿದಿದೆ ಎಂದು ತಿಳಿದು ಕೊಂಡು.



P. Sivaprakasam



C. Muthu

ಹೃದಯ ಪೂರಕ ಪ್ರಾರ್ಥನೆಗಳು
**ಶಿವಪ್ರಕಾಶಂ ಮತ್ತು ಸಿ. ಮುತ್ತು ಮತ್ತು ಕುಟುಂಬ**
(ಪಾ. ಎಸ್ ಸ್ಯಾಮ್ ಸೆಲ್‌ರಾಜ್‌ರವರ ಆತ್ಮೀಯ ಗೆಳೆಯರು)

Posted at "Egmore RMS Patrika Channel" RNI NO. 70107/98, Postal Regn. No. TN/CH (C)/195/24-26 WPP NO. TN/PMG(CCR)/WPP-219/24-26

## Echo of His Call

**YouTube**

Please subscribe

Kindly view and subscribe our **Echo of His Call YouTube Channel** when you get time. Thanks.

- Editor

### OUR BANK DETAILS:

***1. Bank : State Bank of India***

Branch : **Triplicane, Chennai-5**
Name : **S. Sam Selva Raj**
A/C No. : **1023 2934 679**
IFSC : **SBIN 00 00 249**
SWIFT CODE : **SBI NIN BB 455**

***2. Bank : ICICI Bank***

Branch : **Anna Salai, Chennai-6**
Name : **Echo of His Call**
A/C No. : **6038 0502 2319**
IFSC : **ICIC 000 6038**

***3. Bank : State Bank of India***

**(This Account is for Tax Exemption for Indians only )**

Branch : **Triplicane, Chennai-5**
Name : **Echo of His Call Educational Trust**
A/C No. : **1023 2923 805**
IFSC : **SBIN 00 00 249**

**Google Pay: 98410 71858**
**PayPal : SAM SELVA RAJ**

*****

**E.mail : sam@echoofhiscall.org**

# ECHO OF HIS CALL

Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.

Annual Subscription : Rs. 100/- Life Subscription : Rs. 2000/-

The multifarious activities of **Echo of His Call Ministries** are supported by the free-will offerings and donations of God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plant Churches.

If you would like to receive **ECHO OF HIS CALL** magazines regularly, please write to us with your e.mail Id and Cell Phone number. Whenever you change your postal or e.mail addresses, please do inform us your old and new addresses.

**Echo of His Call** is available in 16 languages in our website also. You can read them by going into the site as well as downloading them and get blessed.

Your letters, prayer requests and your financial helps (**Money Orders, Cheques or Demand Drafts, NEFT, PayPal (Sam Selva Raj, sam@echoofhiscall.org) PhonePe (98410 71858), Gpay (98410 71858), Western Union, MoneyGram, etc.**) to **ECHO OF HIS CALL** may please be sent to the address below.

Please send your **Land Phone / Mobile Phone Numbers and E.mail addresses** for updation.

Our address :

**ECHO OF HIS CALL**
10, MOHAMMED ABDULLAH 2ND STREET, CHEPAUK, CHENNAI - 600 005, INDIA
PH: (+91-44) 2852 8282, 2852 9293, 2854 7766/ Cell: (+91) 98410 71852, 95661 31858 / E.mails: sam@echoofhiscall.org / biblecor@yahoo.co.in
Websites: www.echoofhiscall.org / www.stpaulsmatriculation.org

**YOU CAN SEND YOUR DONATION ONLINE ALSO**

**RNI NO. 70107/98**
**Postal Regn. No. TN/CH/(C)/195/24-26**
**WPP NO. TN/PMG(CCR)/WPP- 219/24-26**
**Date of Publication: Second week of every month**
**Date of Posting : 9th & 10th of every month**
**Posted at "Egmore RMS Patrika Channel"**
**on 11th APRIL 2025.**
**If un-delivered please return to:**
**ECHO OF HIS CALL (KANNADA)**
**P.O. Box No. 2957,**
**Chepauk, Chennai - 600 005, INDIA.**
**Phone: (+ 91- 44) 2852 8282, 2852 9293, 2854 7766**

***JESUS LOVES YOU!***

**To**

***GOD BLESS YOU!***

Owned and published by **S. Sam Selva Raj** from New No. 8 & 10, Old No.18 & 19, Mohammed Abdullah 2nd Street, Chepauk, Chennai-600 005 and printed by **S. Sam Selva Raj** at **Echo of His Call Printers,** New No. 8 & 10, Old No.18 & 19, Mohammed Abdullah 2nd Street, Chepauk, Chennai-600 005. Editor: **S. Sam Selva Raj.**